International Journal of Kannada Research
www.kannadajournal.com

**ISSN: 2454–5813**
IJKR 2021; 7(4): 163-169
© 2021 IJKR
www.kannadajournal.com
Received: 04-08-2021
Accepted: 06-09-2021

**Dr. Sanjeev R Nayak**
Ph.D, Assistant Professor,
K.L.E. Societys,
G. H. College, Haveri,
Karnataka, India

**Corresponding Author:**
**Dr. Sanjeev R Nayak**
Ph.D, Assistant Professor,
K.L.E. Societys,
G. H. College, Haveri,
Karnataka, India

# ಆಧುನಿಕ ನೆಲೆಯಲ್ಲಿ ಬದಲಾದ ಜಾತ್ರಾ ಸ್ವರೂಪ

**Dr. Sanjeev R Nayak**

ಜಾಗತೀಕರಣ ಪ್ರಭಾವ ಬೀರುವ ಈ ಸಂದರ್ಭದಲ್ಲಿ ಸಾಮಾಜಿಕ ಜೀವನದಲ್ಲಿ ಆದ ಬದಲಾವಣೆ ಬದಲಾದ ಜೀವನ ಮೌಲ್ಯಗಳು ಇಂದು ಜಾತ್ರಾ ಸ್ವರೂಪದಲ್ಲಿ ಪ್ರಭಾವ ಬೀರಿ ಮೇಲಿಂದ ಮೇಲೆ ಬದಲಾವಣೆಯನ್ನು ತರುತ್ತಿದ್ದರೂ, ಜಾತ್ರೆಗಳು ತಮ್ಮ ಮೂಲಸತ್ವವನ್ನು ಕಳೆದುಕೊಳ್ಳದೆ ಇನ್ನೂ ಹೊಸತನಗಳನ್ನು ಮೈಗೂಡಿಸಿಕೊಂಡು ಹೆಚ್ಚು ಶಿಸ್ತು–ಸುವ್ಯವಸ್ಥೆಯಿಂದ ಜರುಗುತ್ತಲಿವೆ. ಹಳೆಯದನ್ನು ಕಳೆದುಕೊಳ್ಳದೆ ಹೊಸತನ್ನು ಸೇರಿಸಿ ಜಾತ್ರೆಗಳು ವ್ಯವಸ್ಥಿತವಾಗಿ ನಡೆಯುತ್ತವೆ. ಜಾತ್ರೆಗಳು ದೈವರಾಧನೆ ಜೊತೆಗೆ ಅವುಗಳ ವೈಭವಯುತ ಮೆರವಣಿಗೆಯೇ ಮುಂತಾದ ಉದ್ದೇಶಗಳ ಹೊರತಾಗಿ ಅದಕ್ಕಿಂತ ಹೆಚ್ಚು ಹೆಚ್ಚು ಇನ್ನಿತರ ಉದ್ದೇಶಗಳನ್ನು ತನ್ನಲ್ಲಿ ಅಳವಡಿಸಿಕೊಂಡು ಇಂದು ಸಂಕೀರ್ಣ ಸ್ವರೂಪ ಪಡೆದಿವೆ, ಇನ್ನೂ ಪಡೆಯುತ್ತಲಿವೆ. ನಮ್ಮ ಪ್ರಾಚೀನ ಮತ್ತು ಪ್ರಸ್ತುತ ಬದುಕಿನ ಅನೇಕ ಐತಿಹಾಸಿಕ, ಸಾಮಾಜಿಕ, ಸಾಂಸ್ಕೃತಿಕ ಸಂಗತಿಗಳು ಧಾರ್ಮಿಕ ಮುಖವಾಡಗಳನ್ನು ಧರಿಸಿ ಜಾತ್ರೆಗಳ ಆಚರಣಾ ವಿಧಿಗಳಲ್ಲಿ ಸೇರಿ ಹೋಗಿರವದನ್ನು ರಥೋತ್ಸವ, ಪಲ್ಲಕ್ಕಿ ಮರೆವಣಿಗೆ, ಬಂಡಿ ಎಳೆಯುವದು, ಸಿಡಿಯಾಡುವುದು, ಮುಖವಾಡ ಕುಣಿತ, ಬಲಿಮಕ್ಕಳು, ಮಾಸ್ತಿಕೊಂಡಕ್ಕೆ ಬೀಳುವುದು, ಮಾತಂಗಿ ಚಪ್ಪರ ಸುಡುವುದು ಇತ್ಯಾದಿ ಬೇರೆ ಬೇರೆ ರೀತಿಯ ಆಚರಣೆಗಳು ಆಯಾ ಪರಿಸರದಲ್ಲಿ ನೋಡಬಹುದು.

ವಿವಿಧತೆಯಿಂದ ಕೂಡಿರುವ ನಮ್ಮ ಸಂಸ್ಕೃತಿಯಲ್ಲಿ ಸಮಾಜದ ಏಕತೆಯು ನಾಡಿನಾದ್ಯಂತ ನಾವು ಆಚರಿಸುವ ಜಾತ್ರೆಗಳಲ್ಲಿ ಹುದುಗಿಕೊಂಡಿದೆ. ಜಾತ್ರೆಗಳು ಕೇವಲ ಧಾರ್ಮಿಕ ಉದ್ದೇಶಕ್ಕಾಗಿ ಮಾತ್ರವಲ್ಲದೇ ಐತಿಹಾಸಿಕ ಸಾಂಸ್ಕೃತಿಕ, ಬುನಾದಿಯುಳ್ಳ ಈ ಜಿಲ್ಲೆಯ ಜನತೆಯ ಸಂಸ್ಕೃತಿಯ ಪ್ರಸಾರ ಮಾಧ್ಯಮವಾಗಿ ಜಾತ್ರೆಗಳು ಕಂಡುಬರುತ್ತದೆ. ಧಾರ್ಮಿಕ, ಸಾಮಾಜಿಕ ಆರ್ಥಿಕ, ಸಾಂಸ್ಕೃತಿಕ ಭದ್ರ ನೆಲೆಯ ಮೇಲೆ ಬೆಳೆದು ನಿಂತಿರುವ ಜಾತ್ರೆಗಳು ನಮ್ಮ ಜನಜೀವನದ ಮೇಲೆ ಮಾಡಿರುವ ಪರಿಣಾಮ ಅಪಾರ. ಇತ್ತೀಚೆಗೆ ಜಾತ್ರೆಗಳು ಎಷ್ಟು ಕ್ರಮಬದ್ಧವಾಗಿ ನಡೆಯುತ್ತವೆ ಎಂದರೆ ಪ್ರಮುಖ ಜಾತ್ರೆಗಳಲ್ಲಿ ಜಾತ್ರೆಯ ವವ್ಯಸ್ಥೆಗಾಗಿ ಹತ್ತು ಹದಿನೈದು ಜಾತ್ರಾ ಸಮಿತಿಗಳೇ ಆ ಸಮಯಕ್ಕೆ ಪ್ರತ್ಯೇಕವಾಗಿ ಕಾರ್ಯ ನಿರ್ವಹಿಸುವದು ಕಂಡು ಬರುತ್ತದೆ. ಎರಡು ವರ್ಷಕ್ಕೊಮ್ಮೆ ನೆಡೆಯವ ಶಿರಶಿ ಮಾರಿಕಾಂಬೆ ಜಾತ್ರೆ, ಯಲ್ಲಾಪುರದ ಗ್ರಾಮ ದೇವಿ ಜಾತ್ರೆ, ಪ್ರತಿ ವರ್ಷ ನೆಡೆಯವ ಉಳವಿ ಚನ್ನಬಸವೇಶ್ವರ ಜಾತ್ರೆ, ಭಟ್ಕಳದ ಮುರೇಡಶ್ವರ ರಥೋತ್ಸವ, ಹೊನ್ನಾವರ ಕುಮಾಟದ, ಅಂಕೋಲೆಯ ವೆಂಕಟ್ರಮಣ ರಥೋತ್ಸವಗಳಲ್ಲಿ ಒಂದು ತಿಂಗಳನಿಂದಲೇ ಪೂರ್ವ ತಯಾರಿ ನಡೆಯುತ್ತದೆ. ಅಷ್ಟೇಯಲ್ಲದೇ ಇತ್ತಿಚೆಗೆ ಜಾತ್ರೆಯಲ್ಲಿ ಉಂಟಾಗಬಹುದಾದ ತೊಂದರೆಗಳನ್ನು ಎದುರಿಸಲು ಉಚಿತ ವೈದ್ಯಕೀಯ ಸೇವೆ, ಬೆಂಕಿಯಂತಹ ಅವಘಡಗಳನ್ನು ತಡೆಯಲು ಅಗ್ನಿ ಶಾಮಕದಳದ ವ್ಯವಸ್ಥೆಯನ್ನು ಮುಂಜಾಗ್ರತವಾಗಿ ಜಾತ್ರಾ ಸ್ಥಳಗಳಲ್ಲಿ ಮಾಡಲಾಗುತ್ತದೆ. ವಿದ್ಯುದ್ದೀಪ ವ್ಯವಸ್ಥೆ, ನೀರಿನ ಸರಬರಾಜು, ಜಾತ್ರಾ ಕ್ಷೇತ್ರದ ಪರಿಸರ ನೈರ್ಮಲ್ಯಗಳೆಡೆಗೆ ಕಾಳಜಿ ಪೂರೈಸಲಾಗುತ್ತದೆ. ವ್ಯಾಪಾರ ವ್ಯವಹಾರಗಳು ಮನರಂಜನೆ ಕಾರ್ಯಕ್ರಮಗಳು ಅಚ್ಚುಕಟ್ಟಾಗಿ ನಡೆಯುವಂತೆ ತಕ್ಕ ಏರ್ಪಾಡು ಮಾಡಲಾಗುತ್ತವೆ. ಜಾತ್ರೆ ನೆಡೆಯವ ಪ್ರದೇಶಗಳಲ್ಲಿ ವಸ್ತು ಪ್ರದರ್ಶನಗಳಿಗೆ ಅವಕಾಶ ಕಲ್ಪಿಸಿಕೊಟ್ಟು, ಆಯಾ ಪ್ರದೇಶದಲ್ಲಿ ವಿಶೇಷವಾದ ಗ್ರಾಮ ಪಂಚಾಯತಿಗಳು ಸರಕಾರದ ಪ್ರಗತಿಗಳನ್ನು ಬಿಂಬಿಸುವ ಭಿತ್ತಿಚಿತ್ರಗಳನ್ನು ಪ್ರದರ್ಶಿಸಲಾಗುತ್ತದೆ. ಹಲವು ಬಗೆಯ ಜನೋಪಯೋಗಿ ಕಾರ್ಯಕ್ರಮಗಳನ್ನು ವಿವಿಧ ಸ್ಥಳೀಯ ನ್ಯೂಸ್, ಪತ್ರಿಕಾ ಮಾಧ್ಯಮಗಳ ಮೂಲಕ ಸಾದರಪಡಿಸಲಾಗುತ್ತದೆ. ಪ್ರಾಚೀನ ಕಾಲದ ಜಾತ್ರೆಯ ಆಚರಣೆಗಳು ವಿಧಿ ವಿಧಾನಗಳು ಈಗಲೂ ಇದ್ದಿರಬಹುದಾದರೂ ಜಾತ್ರೆಯ ಕೆಲವ ಸಿದ್ದತೆಯಲ್ಲಿ ಅಗಾಧವಾದ ಬದಲಾವಣೆಗಳು ನಡೆಯುತ್ತವೆ. ಹಿಂದಿನ ಕಾಲದ ಜಾತ್ರೆಗಳಲ್ಲಿ ಆಧುನಿಕ ಸ್ಪರ್ಶವೂ ಇರಲ್ಲಿಲ್ಲ.

ಜಾತ್ರೆಗಳಿಗೆ ಸರಕಾರದ ಅಥವಾ ಖಾಸಗಿ ಆಧುನಿಕ ಯಂತ್ರಚಾಲಿತ ಸಾರಿಗೆ ವ್ಯವಸ್ಥೆ ಇರಲ್ಲಿಲ, ನಡೆದುಕೊಂಡು ಅಥವಾ ಸೈಕಲ ಅಥವಾ ಎತ್ತಿನ ಗಾಡಿಯಲ್ಲಿ ಬರುತ್ತಿದ್ದರು. ಜಾತ್ರೆಗೆ ಬರುವ ವ್ಯಾಪಾರಿಗಳೂ ಗಾಡಿಯಲ್ಲೇ ಬರುತ್ತಿದ್ದರು. ಆದರೆ ಇಂದಿನ ವಾಹನ ಸೌಲಭ್ಯಗಳು ಅನೂಕೂಲ ಸರಕಾರದಿಂದ, ಬಾಡಿಗೆ ವಾಹನಗಳು, ಸ್ವಂತ ವಾಹನಗಳಿಂದಲೂ ಬಹು ಬೇಗ ಜಾತ್ರೆಗೆ ತಲಪಪಬಹುದು. ಆದರೂ ಇಂದೂ ಸಹ ಹಳೆಯ ಸಂಪ್ರದಾಯದಂತೆ ಉಳವಿ, ಶಿರಶಿ, ಮುಂಡಗೋಡ ಜಾತ್ರೆಗೆ ಚಕ್ಕಡಿಗಾಡಿಗಳಲ್ಲಿ ಬರುವ ಭಕ್ತರನ್ನು ನೋಡಬಹುದು, ಪ್ರಾಚೀನ ಕಾಲದ ಜಾತ್ರೆಗಳಲ್ಲಿ ಎಲೆಕ್ಟ್ರಿಸಿಟಿ ಬೀದಿಯ ದೀಪಗಳು ಇರಲ್ಲಿಲ ಆ ಸಂದರ್ಭದಲ್ಲಿ ಪ್ರತಿ ಅಂಗಡಿಯವರೂ ಪಂಜು– ದ್ವೀಪಗಳನ್ನು ಹೊತ್ತಿಸಿಕೊಂಡು ಸರದಿಯ ಪ್ರಕಾರ ಕಾವಲು ಕಾಯುತ್ತಾ ವ್ಯಾಪಾರ ಮಾಡುತ್ತಿದ್ದರು. ಕಾರಣ ಜಾತ್ರೆಯ ಜನರಿಗಿಂತ ಕಳ್ಳಕಾಕರೇ ಅಧಿಕ ಸಂಖ್ಯೆಯಲ್ಲಿರುತ್ತಿದ್ದರು. ಆದರೆ ಈಗ ಜಾತ್ರೆಯ ಕಾಲಕ್ಕೆ ಹತ್ತೆಂಟು ತುಕಡಿ ಮೀಸಲು ಪೋಲೀಸ್ ಪಡೆಯೂ ಬರುತ್ತದೆ ಭಕ್ತಾದಿಗಳ ಸಂಖ್ಯೆಗೆ ಹತ್ತಿರ ಹತ್ತಿರ ಪೋಲಿಸರೂ ಇರುತ್ತಾರೆ ಎಂಬತೆ ಇರುತ್ತದೆ. ಪೋಲೀಸ ವ್ಯವಸ್ಥೆ ಇಲ್ಲದಿದ್ದರೆ ಜಾತ್ರೆಯ ಜನರ ನಿರ್ವಹಣೆ ಅಸಾಧ್ಯ ಈಗ ಭಧ್ರವಾದ ಪೋಲಿಸ ವ್ಯವಸ್ಥೆ, ವಿದ್ಯುತ್ ದ್ವೀಪಗಳಿಂದ ಜಾತ್ರೆಗಳು ನಡೆಯುತ್ತವೆ. ಆದರೂ ಈಗಲೂ ಕಳ್ಳತನಗಳಿಗೇನೂ ಕಡಿಮೆಯಿಲ್ಲ, ಪ್ರತೀ ವರ್ಷದ ಜಾತ್ರೆಗಳಲ್ಲೂ ಕಳ್ಳತನದ ಕುರಿತು ದೂರ ಪೋಲಿಸ್ ಇಲಾಖೆಯಲ್ಲಿ ದಾಖಲಾಗುತ್ತದೆ. ಆದರೆ ಒಂದು ಕಾಲಕ್ಕೆ ಎರಡು ಮೂರು ಸಾವಿರವಿರುತ್ತಿದ್ದ ಜನಸಂಖ್ಯೆ ಈಗ ಲಕ್ಷ ಲಕ್ಷವಾಗಿ ಬೆಳೆದಿದೆ, ಆಧುನಿಕ ಸೌಲಭ್ಯಗಳು ಒದಗಿ ಬಂದಿದೆ. ಹಳ್ಳಿಯ ಮೂಲೆ ಮೂಲೆಗಳಿಗೆ ರಸ್ತೆಗಳಾಗಿವೆ, ವಾಹನ ಸೌಕರ್ಯವಿದೆ, ಜಾತ್ರೆಯ ಜಾಗಗಳೆಲ್ಲ ರಾತ್ರಿಯೂ ಹಗಲಿನಂತಿರುತ್ತದೆ ಝುಗಮಗಿಸುವ ಬೆಳಕು ಎಲ್ಲೆಲ್ಲೂ ಹರಡಿಕೊಂಡಿರುತ್ತದೆ. ನಾಗರಿಕತೆ ಈ ಪರಿ ಬೆಳೆದರೂ (ಜನ ಮರುಳೋ, ಜಾತ್ರೆ ಮರುಳೋ) ಅನೇಕ ಬಗೆಯ ಅನಾಹುತಗಳು ಘಟಿಸುತ್ತವೆ. ಸಾಂಪ್ರದಾಯಿಕ ಭಕ್ತಿ ಗಿಂತ ಮನರಂಜನೆಯ ಉದ್ದೇಶವಾಗಿ ಹೆಚ್ಚಾಗಿದ್ದು ಅದಕ್ಕಾಗಿ ಜನ ಸೇರುತ್ತಾರೆ.

ಮೊದಮೊದಲು ದೈವರಾಧನೆಯ ಹಿನ್ನಲೆಯಲ್ಲಿ ಮಾತ್ರ ನೆಪದಲ್ಲಿ ನಡೆಯುವ ಜಾತ್ರೆ ಈಗ ವ್ಯಾಪರ ಮನೋರಂಜನೆಯ ನೆಲೆಗೆ ಏರಿದ್ದು ಒಂದು ಸಾಂಸ್ಕೃತಿಕ ಆಯಾಮವನ್ನು ಪಡೆದುಕೊಳ್ಳುತ್ತದೆ. ಜಾತ್ರೆಯ ಕೊನೆಯ ದಿನ ಸಹಜವಾಗಿ ನಡೆಯುತ್ತಿದ್ದ ತೆಪ್ಪೋತ್ಸವದಲ್ಲಿ ಪ್ರಾಚೀನ ಕಾಲದಲ್ಲಿ ಕೇವಲ ಮಣ್ಣಿನ ಹಣತೆ ದೀಪಗಳಿಗೆ ಸೀಮಿತವಾಗಿದ್ದ ರಾತ್ರಿಯ ತೆಪ್ಪೋತ್ಸವಗಳು ಈಗ ಹೊಳೆ, ನದಿ, ಸಮದ್ರ ಪಕ್ಕದಲ್ಲಿ ವಿದ್ಯುತ್ ದ್ವೀಪಗಳ ಅಲಂಕಾರದ ಮೂಲಕ ಇತ್ತಿಚೆಗೆ ವಿಶೇಷ ಬದಲಾವಣೆ ಪಡೆದುಕೊಂಡವು, ಮೊದಲು ಇಡಿ ಜಾತ್ರೆಯ ವ್ಯವಸ್ಥೆಯನ್ನು ದೇವಸ್ಥಾನದ ಧರ್ಮದರ್ಶಿ ಸಮೀತಿಯೇ ನೋಡಿಕೊಳ್ಳುತ್ತಿತ್ತು. ಈಗ ಅದರೊಂದಿಗೆ ಜಾತ್ರೆಯ ಕೊನೆಯ ಕಾರ್ಯಕ್ರಮವಾದ ತೆಪ್ಪೋತ್ಸವದ ವ್ಯವಸ್ಥೆಗಾಗಿಯೇ 'ತೆಪ್ಪೋತ್ಸವ ಸಮಿತಿ' ರಚನೆಯಾಗುತ್ತದೆ. ಈ ಜಿಲ್ಲೆಯ ಗಂಗಾನದಿ, ಅರಬ್ಬಿ ಸಮುದ್ರ, ಸ್ಥಳಿಯ ಹೊಳೆ, ಕೆರೆಗಳಲ್ಲಿ ತೆಪ್ಪೋತ್ಸವದಲ್ಲಿ ಸಿಡಿಮದ್ದುಗಳು ಸಿಡಿಯತೊಡಗುತ್ತವೆ. ಹೀಗೆ ಮನರಂಜನೆಗೆ ಯಾವ ಜಾತಿಧರ್ಮದ ಗೋಡೆಗಳು ಅಡ್ಡಬರದಂತೆ ತೆಪ್ಪೋತ್ಸವವೆಂಬ ಸಾಂಸ್ಕೃತಿಕ ಉತ್ಸವಕ್ಕೆ ಜನರು ಬರುವುದು ಹೆಚ್ಚಾಗುತ್ತಿದೆ ನೆರೆಯುವ ಲಕ್ಷಾಂತರ ಮಂದಿಯಲ್ಲಿ ಅವ್ಯವಸ್ಥೆಯಾಗದಂತೆ ಪೋಲೀಸರೊಂದಿಗೆ ಧರ್ಮದರ್ಶಿ ಸಮಿತಿಯವರು, ತೆಪ್ಪೋತ್ಸವ ಸಮಿತಿಯವರು ನಾಗರಿಕ ಹಾಗೂ ವಿವಿಧ ಸ್ವಯಂಸೇವಾ ಸಂಘಟನೆಗಳವರು ಜಾಗ್ರತೆ ವಹಿಸಿ ನೋಡಿಕೊಳ್ಳುತಾರೆ. ಹೀಗಾಗಿಯೇ ಆರಂಭದ ದಿನಗಳಲ್ಲಿ ನೆರೆಯುತ್ತಿದ್ದ ಜನಸಂಖ್ಯೆ ವರ್ಷದಿಂದ ವರ್ಷಕ್ಕೆ ಅಧಿಕವಾಗುತ್ತದೆ. ಈ ದೃಷ್ಟಿಯಿಂದಲೇ ತೆಪ್ಪೋತ್ಸವ ಸಾಂಸ್ಕೃತಿಕ ಲೋಕದ ಬಹುಮುಖ್ಯ ಭಾಗವಾಗಿದೆಯೆಂದರೆ ತಪ್ಪಾಗಲಾರದು.

ಪ್ರಾಚೀನ ಕಾಲದಲ್ಲಿ ಪಟೇಲ, ಗೌಡ, ಗಾವಂಕರ, ಊರಿನ ಪ್ರಮುಖರಿಂದ ಊರ ಒಕ್ಕಟ್ಟನಿಂದ ಸಹಕಾರದಿಂದ ನಡೆಯುತ್ತಿರು ಜಾತ್ರೆಗಳು ಬದಲಾದ ಸರಕಾರದ ನಿಯಮದಲ್ಲಿ ಇಂದು ಪ್ರಮುಖ ಜಾತ್ರೆಗಳು ಸರಕಾರದಿಂದ ನೇಮಕವಾದ ಧರ್ಮದರ್ಶಿ ಸಮಿತಿಯವರು ಆಗಿದ್ದೂ ಸರಕಾರದ ಸಹಾಯದ ಮೂಲಕ ಸ್ಥಳೀಯ ಪ್ರತಿ ತಾಲೂಕಿನ ತಹಶೀಲದಾರ ನೇತ್ರತ್ವದಲ್ಲಿ ಸರಕಾರದ ಸಂಸ್ಥೆಗಳ ಮುಖ್ಯಸ್ಥರು, ಅನೇಕ ಸಂಘಟನೆಗಳು ಹಾಗೂ ಜನಸಮೂಹಗಳು ಜವಾಬ್ದಾರಿಯನ್ನು ನಿರ್ವಹಿಸುತ್ತವೆ, ಜಾತ್ರೆಗೆ ರಥದ ಸಿದ್ಧತೆ, ಕಲಶ, ಪಲ್ಲಕ್ಕಿ ಹೊರುವ, ದೀವಟ್ಟಿಗೆ ಹಿಡಿಯುವ, ವಾದ್ಯಸೇವೆ ನಡೆಸುವ ರಥೋತ್ಸವದಲ್ಲಿ ರಥವನ್ನು ಮರೆವಣಿಗೆಗೆ ಒಯ್ದು ಮರಳಿ ಸೇರಿಸುವವರೆಗಿನ ವಿವಿಧ ಸೇವೆ ಅರ್ಪಿಸುವ ಜವಾಬ್ದಾರಿಯನ್ನು ತಲೆತಲಾಂತರದಿಂದ ಮಾಡುತ್ತಾ ಬಂದ ಕುಟುಂಬದವರೇ ಇಂದಿಗೂ ಮುಂದುವರೆಸಿಕೊಂಡು ಬರುತ್ತಿದ್ದರೂ ಕೆಲವ ಸಂದರ್ಭದಲ್ಲಿ ಅವರ ಮರಣ ನಂತರ ಅವರ ಮಕ್ಕಳು ಮುಂದುವರಿಸಿಕೊಂಡು ಹೋಗಬೇಕಾಗುತ್ತದೆ. ಆದರೆ ನೌಕರಿ ನಿಮಿತ್ತ ಊರ ಹೊರಗೆ ಹೋದವರು ಅಲ್ಲಿಯೇ ಖಾಯಂ ನಿವಾಸಿಗಳಾದವರು ಇತ್ತೀಚೆಗೆ ಆಸಕ್ತಿ ತೋರುತ್ತಿಲ.

**ಅನ್ನ ಸಂತರ್ಪಣೆ**

ಹಿಂದೆ ಜಾತ್ರೆಯ ದಿನದಲ್ಲಿ ಅನ್ನ ಸಂತರ್ಪಣೆ ನಡೆಯುತ್ತಿತ್ತೆಂದೂ ದೇವಾಲಯದ ಸುತ್ತಲಿನ ಅಗ್ರಹಾರಗಳಲ್ಲಿ ಶಕ್ತ್ಯಾನುಸಾರ ಅತಿಥಿ ಸತ್ಕಾರ ನಡೆಯುತ್ತಿತ್ತೆಂದೂ ತಿಳಿದುಬರುತ್ತದೆ. ದೇವಸ್ಥಾನದ ಉಂಬಳಿ ಜಮೀನು ಅನುಭೋಗಿಗಳು, ದಾನಿಗಳು ಈ ಸೇವೆಯನ್ನು ಮಾಡುತ್ತಿದ್ದರು. ಆದರೆ ಇಂದು ಅವೆಲ್ಲಾ ನಿಂತುಹೋಗಿದೆ. ಭೂ ಸುಧಾರಣಾ ಕಾನೂನಿನ ಪರಿಣಾಮವಾಗಿ ಜಮೀನು ಉಳುವವರಿಗೆ ದಕ್ಕಿದೆ. ಈಗ ಧರ್ಮದರ್ಶಿ ಸಮಿತಿಯವರೇ ರಥೋತ್ಸವದ ದಿನ ಭಕ್ತರ ಉಪಹಾರದ ವಿತರಣೆ, ಕೆಲವಕಡೆ ಅನ್ನಸಂತರ್ಪಣೆ ಮಾಡಿಸುತ್ತಾರೆ ದೇವಸ್ಥಾನ ಮುಜರಾಯಿ ಇಲಾಖೆಗೆ ಸಂಬಂಧಪಟ್ಟದ್ದು ಒಂದು ಕಾಲದಲ್ಲಿ ಇದ್ದಿರಬಹುದಾದ ನಿಷಿದ್ಧದ ನಿಯಮಾವಳಿಗಳು ಇಂದಿಲ್ಲ. ಎಲ್ಲ ಜಾತಿ–ಜನಾಂಗದ ಜನರೂ ಜಾತ್ರೆಯ ಸಂದರ್ಭದಲ್ಲಿ ನೆರೆದು ಸಂತಸ ಹಂಚಿಕೊಳ್ಳುತ್ತಾರೆ ದೇಗುಲದ ಪ್ರವೇಶವೂ ಮುಕ್ತವಾಗಿರುತ್ತದೆ ಹಬ್ಬದಲ್ಲಿ ಪಾಲ್ಗೊಳ್ಳುವ ಜನ/ಜಾತಿಗಳಲ್ಲಿ ಗುನಗರು, ಕೊಂಕಣಿಗರು, ಹಾಲಕ್ಕಿ ಒಕ್ಕಲಿಗರು, ಪಟಗಾರರು, ಮಡಿವಾಳರು, ನಾಯ್ಕರು, ಭಂಡಾರಿಗಳು, ಬ್ರಾಹ್ಮಣರು, ನಾಯಕರು, ಮುಕ್ರಿಗಳು, ದೇವಾಡಿಗರು, ನಾಡವರು, ಆದರೆ ಜಾತ್ರೆಯ ಸಂದರ್ಭದಲ್ಲಿ ಅದರ ವಿಧಿವಿಧಾನಗಳನ್ನು ನಿರ್ದೇಶಿಸಲು, ನಿಯಂತ್ರಿಸಲು ಅಧಿಕಾರ ಹೊಂದಿರುತ್ತಾರೆ. ಅವರ ನೇತೃತ್ವದಲ್ಲಿ ಎಲ್ಲ ಧಾರ್ಮಿಕ ಆಚರಣೆಗಳೂ ವಿಧಿವತ್ತವಾಗಿ ನಡೆಯುತ್ತವೆ. ಜಾತ್ರೆ ಸುಖಾಂತ್ಯ ಕಾಣುತ್ತದೆ.

**ಮನರಂಜನೆಗಳು**

ಹಿಂದಿನ ಕಾಲದಲ್ಲಿ ಜಾತ್ರೆಗಳಲ್ಲಿ ಮನರಂಜನೆಗಳು ಉಚಿತವಾಗಿರುತ್ತಿದ್ದವು. ಇತ್ತಿಚೆಗೆ ಜಾತ್ರೆಗಳಲ್ಲಿ ಮನರಂಜನೆಗೆ ಹಣ ಕೊಟ್ಟು ಟಿಕೇಟು ಪಡೆದು ಮನರಂಜನೆ ನೋಡಬೇಕು. ಇನ್ನೂ ಜನರ ಮೂಲಭೂತ ಜಿವನಾವಶ್ಯಕವಾದ ಬಟ್ಟೆ, ಧಾನ್ಯಗಳು, ಕೃಷಿ ಸಾಮಗ್ರಿಗಳು, ಮಣ್ಣಿನ ಮಡಕೆಗಳು ಇಲ್ಲವಾಗಿವೆ. ಅಲ್ಲಿ ಅವುಗಳಿಗೆ ಜಾಗವೂ ಎಲ್ಲ ಬೇಡಿಕೆಯೂ ಇಲ್ಲವಾಗಿದೆ. ಅವುಗಳ ಜಾಗವನ್ನು

ಸ್ಟೀಲು, ಸಿಲಾವರ್, ಪ್ಲಾಸ್ಟಿಕ್ಕಿನ ವಸ್ತುಗಳು ಆಕ್ರಮಿಸಿಕೊಂಡಿವೆ. ಇದರೊಂದಿಗೇ ಗ್ರಾಮಾಂತರ ಪ್ರದೇಶದ ಗುಡಿ ಕೈಗಾರಿಕೆಗಳೂ, ಅವುಗಳ ಮೂಲಕವೇ ಬದುಕು ಸಾಗಿಸುತ್ತಿದ್ದ ಕುಂಬಾರಿಕೆಯವರು, ಕಮ್ಮಾರರು, ಮೊದಲಾದವರು ಇಲ್ಲವಾಗಿದ್ದಾರೆ. ಇನ್ನೂ ಜಾತ್ರೆಯಲ್ಲಿ ಎಲ್ಲೆಲ್ಲೂ ಜನಸಾಗರ ಪರಸ್ಪರ ಹಾಯ್–ಬಾಯ್‌ಗಳ ವಿನಿಮಯ ಗಡಿಬಿಡಿಯಿಲ್ಲದ ಬಿಡುವು–ಸಂತಸಗಳು, ಸಿನಿಮಾ–ನಾಟಕ–ಸರ್ಕಸ್, ಜಾದೂ ಪ್ರದರ್ಶನಗಳ ಜೊತೆಗೆ ಇಡೀ ಜಾತ್ರೆ ಒಂದು ಆಧುನಿಕ ಥಳುಕಿನ, ವಸ್ತುಗಳ ಜಾಹಿರಾತಿನ ಪ್ರದೇಶವೆಂಬಂತೆ ಬದಲಾಗಿರುತ್ತದೆ. ಒಂದು ಕಾಲದ ವಸ್ತು ವಿನಿಮಯದ ಕೇಂದ್ರ, ಜೀವನಾವಶ್ಯಕ ವಸ್ತುಗಳ ಪೂರೈಕೆಯ ಸಂಗಮ ಸ್ಥಳವಾದ ಜಾತ್ರೆ ಇಂದು ಕೇವಲ ಮೋಜಿನ–ಮನರಂಜನೆ–ವ್ಯಾಪರ–ವ್ಯವಹಾರ–ಸಂಸ್ಕ್ರತಿಯ ಭ್ರಮಾಲೋಕವಾಗಿ ಪರಿವರ್ತನೆಯಾಗಿ ಬಿಟ್ಟಿದೆ. ಮೂಲದೈವರಾಧನೆ ಗೌಣವಾಗುತ್ತಿದೆ.

**ಭಯ ಮತ್ತು ನಂಬಿಕೆ**

ಜಾತ್ರೆಯಲ್ಲಿ ಧಾರ್ಮಿಕ ಆಚರಣೆಗಳನ್ನು ಗಮನಿಸಿದರೆ ಮೊದಮೊದಲು ಭಯದಿಂದ ದೈವ ಭಕ್ತನಾದ ಮಾನವ ಇತ್ತೀಚೆಗೆ ಮನುಷ್ಯರು ತಾನು ಮಾಡುವ ತಪ್ಪುಗಳಿಗೆ ಹೆದರಿ ಆತನಿಗೆ ಗೊತ್ತಿದ್ದೋ ಗೊತ್ತಿಲ್ಲದೆಯೋ ಮಾಡುವ ತಪ್ಪುಗಳು ಅವನನ್ನು ಕಾಡುತ್ತಲೇ ಇರುತ್ತವೆ. ಅವುಗಳಿಂದ ಹೊರಬರಲು ದೇವರ ಬಳಿ ಹೋಗುವದು ಹಲವು ಬಗೆಯ ನಂಬಿಕೆಗಳು ಆಚರಣೆಗಳ ಮತ್ತು ಆರಾಧನೆಗಳನ್ನು ಮಾಡುವದು ನಮ್ಮ ಜಾತ್ರೆ ಹಬ್ಬಗಳಲಿ ಎಲ್ಲ ಜನಾಂಗಗಳಲ್ಲೂ ಎಲ್ಲಾ ಧರ್ಮಗಳಲ್ಲೂ ಇರುವುದು ನಮಗೆ ಕಂಡು ಬರುತ್ತದೆ. ನಮ್ಮ ಜಾತ್ರೆ ಹಬ್ಬಗಳಲ್ಲಿ ಪೂಜೆ, ಹರಕೆ ಸಲ್ಲಿಸಿದ್ದರೆ ಕ್ರಿಶ್ಚಿಯನ್ನರು ವರ್ಷಕ್ಕೊಮ್ಮೆಯಾದರೂ ತಮ್ಮ ಪಾಪ ನಿವೇದನೆ ಮಾಡಿಕೊಳ್ಳಲೇ ಬೇಕು. ಅದು ಗುಡ್ ಫ್ರೈಡೇ ಆಚರಣೆಯ ಸಂದರ್ಭದಲ್ಲಿ ಸಾಮೂಹಿಕವಾಗಿ ನಡೆಯುತ್ತದೆ. ಹಾಗೆಯೇ ಮುಸಲ್ಮಾನರ ಇನ್ನಿತರ ಧರ್ಮೀಯರು ಕೂಡಾ ತಾವು ಮಾಡಿದ ಪಾಪಚರಣೆಗಳ ಶುದ್ದಿಗಾಗಿಯೇ ವಾರ್ಷಿಕ ಆರಾಧನೆಯಲ್ಲಿ ತಮ್ಮ ತಮ್ಮ ದೇವರನ್ನು ಪೂಜಿಸುತ್ತಾರೆ. ಒಂದರ್ಥದಲ್ಲಿ ಮನುಷ್ಯನ ಸುಖ ಬದುಕಿಗೆ ಈ ಬಗೆಯ ಕ್ರಿಯಾಚರಣೆಗಳೂ ಅವುಗಳ ಹಿಂದಿರುವ ನಂಬಿಕೆಗಳೂ ಪೂರಕವಾಗಿ ಕೆಲಸ ಮಾಡುತ್ತವೆ.

**ಸಾರ್ವತೀಕರಣ**

ಇನ್ನೂ ಆಧುನಿಕ ಸಂಧರ್ಭದ ಇಂದಿನ ಜಾತ್ರೆಗಳು ನಡೆಯವ ಕೆಲವು ದೇವಸ್ಥಾನಗಳ ಜಾತ್ರೆಗಳ ಕಾಲಘಟ್ಟದಲ್ಲಿ ಬದಲಾವಣೆಯಾಗಿ ಅನಂತರ ಸರ್ಕಾರದ ಮುಜರಾಯಿ ಇಲಾಖೆಗೆ ವರ್ಗಾವಣೆಗೊಂಡವು ಧರ್ಮದರ್ಶಿ ಸಮೀತಿ ಎದುರು ಪೂರ್ಣ ಜವಾಬ್ದಾರಿ ಹೊತ್ತು ಚಟುವಟಿಕೆಗಳನ್ನು ನಡೆಸುತ್ತಿದೆ, ದೇಗುಲಕ್ಕೆ ಯಾವುದೇ ನಿರ್ಬಂಧವಿಲ್ಲದೇ ಎಲ್ಲರಿಗೂ ಮುಕ್ತ ಪ್ರವೇಶವಿದೆಯೆಂಬ ಹೆಚ್ಚುಗಾರಿಕೆಯನ್ನು ಹೊರತುಪಡಿಸಿದರೆ ಕೆಲವು ದೇವಾಲಯಗಳಲ್ಲಿ ಆಡಳಿತ ಮಂಡಳಿ ಮತ್ತು ಪೂಜಾರಿಗಳಲ್ಲಿ ಬಿಕ್ಕಟ್ಟು ತಲೆದೋರಿದೆ. ಜಾತ್ರೆಯ ಕಾಲದಲ್ಲಿ ಒಕ್ಕಟಿನಂತೆ ಕಂಡರೂ ಅಂದು ಕೇವಲ ಕ್ಷಣೀಕವಾಗಿ ತೋರುತ್ತದೆ.

**ಬ್ರಾಹ್ಮಣೀಕರಣ**

ಈ ಹಿಂದೆ ಹಿಂದುಳಿದ ವರ್ಗಗಳು ಆರಾಧಿಸುತಿದ್ದ ದೇವಾಲಯಗಳ ಜಾತ್ರೆಗಳಲ್ಲಿ ಕೃಷಿಕರೇ ಹೆಚ್ಚಾಗಿರುವ ಜಾತ್ರೆಗಳಲ್ಲಿ ಭೂಮಿತಾಯಿಯ ಆರಾಧನೆಯ ಒಂದು. ಕೃಷಿಕನಿಗೆ ಭೂಮಿಯೇ ಪ್ರಧಾನವಾದದ್ದು, ಈ ಭೂಮಿ ಕೃಷಿಕನ ತಾಯಿ, ಇಡಿ ಬದುಕನ್ನು ಪೊರೆಯುವ ಮಾತೆ, ಇಂಥಾ ಭೂಮಿಯನ್ನು ಫಲ ಪಡೆದ ಆತ ಆ ಮಾತೆಯ ಹೆಸರಿನಲ್ಲಿ ಜಾತ್ರೆಯ ಆರಾಧನೆ ರೂಪದಲಿ ಆರಾಧಿಸುತ್ತಾನೆ.ಬಂಡಿ ಜಾತ್ರೆಯಲ್ಲಿ ನಡೆಯವ ಕೃಷಿ ಆಚರಣೆಗಳು ಇದಕ್ಕೆ ಪುಷ್ಟಿ ನೀಡುತ್ತವೆ. ಆ ದೇವಸ್ಥಾನಗಳು ಆರ್ಥಿಕವಾಗಿ ಬಲಾಢ್ಯವಾಗಿದ್ದರೆ ಅಲ್ಲಿ ಬ್ರಾಹ್ಮಣರ ಪ್ರವೇಶದಿಂದ ಆಚಾರಣಾ ವಿಧಿನಾಗಳಲೂ, ಪೂಜಾವಿಧಾನಗಳಲ್ಲೂ ಕೆಲವು ಬದಲಾವಣೆಯಾಗಿದೆ. ಜಾನಪದ ವಿಧಿವಿಧಾನಗಳ ಆಚರಣಿಯಲ್ಲಿ ಶಿಷ್ಟಾಚರ ಆಚರಣೆ ಸೇರಿಕೊಂಡಿದೆ. ಕೆಲವೊಮ್ಮೆ ಶಿಷ್ಟ ಮತ್ತು ಜನಪದ ಶೈಲಿಯ ಮಿಶ್ರಣವಾಗಿ ಕಂಡು ಬರುತ್ತದೆ.

**ಸಂಸ್ಕೃತೀಕರಣ**

ನಮ್ಮ ನಾಡಿನಲ್ಲಿನ ಬಹುತೇಕ ಕಡೆಯಲ್ಲಿ ಕಂಡು ಬರುವ ಐತಿಹಾಸಿಕ ವ್ಯಕ್ತಿಗಳು ದೇವರಾಗಿ ಮಾರ್ಪಡುವುದು ವಿಶೇಷವಾಗಿ ಬಡ ಮತ್ತು ಕೆಳಜನರಲ್ಲಿ ಹೆಚ್ಚು ಹೆಚ್ಚು ಕಂಡು ಬರುತ್ತದೆ. ಇಂದಿಗೂ ಕೆಳ ವರ್ಗದ ದೇವರಗಳಲ್ಲಿ 'ಸಂಸ್ಕೃತೀಕರಣ'ಕ್ರಿಯೆ (ಖಚಿಟಿಇಡುಣಖಚಿಣುಂಟಿ) ನಡೆಯುವುದೂ ನಾವು ನೋಡಬಹುದು. ಪ್ರಾದೇಶಿಕ ಅಥವಾ ಸ್ಥಳೀಯವಾದ ದೈವವೊಂದು ಇದ್ದರೆ, ಅದನ್ನು ಆರಾಧಿಸುವ ಬುಡಕಟ್ಟು ಅಥವಾ ಹಿಂದುಳಿದ ಜನ ನಾಗರಿಕರಾಗುತ್ತ ಬಂದಂತೆ ಕರಿ ದೇವರು ಈಶರ್ವ ಪ್ರತಿರೂಪ, ಬೋಮ್ಮಯ ಬ್ರಹ್ಮನ ಪ್ರತಿರೂಪ ಹೀಗೆ ಆ ದೈವವನ್ನು ಪೌರಾಣಿಕ ದೈವವೊಂದರ ಜೊತೆಗೋ ಅದರ ಕತೆಯೊಂದರ ಜೊತೆಗೋ ಜೋಡಿಸುವ ಪ್ರಯತ್ನಗಳೂ ನಡೆಯುತ್ತವೆ. ಇದರ ಉದ್ದೇಶ ತಾವು ಮೇಲ್ಜಾತಿಯರ ಪದ್ದತಿಗಳನ್ನು ಅನುಸರಿಸಿ ಶ್ರೇಷ್ಠರೆನಿಸಿಕೊಳ್ಳಲು ಹವಣಿಸುವದನ್ನು ನೋಡಬಹುದು. ಕೆಳ ಮತ್ತು ಮಧ್ಯಮ ದೇವಾಲಯಗಳ ಜಾತ್ರೆಗಳಲ್ಲಿ ಭಕ್ತರು ವೈದಿಕ ಬ್ರಾಹ್ಮಣರನ್ನು ಕರೆಯಿಸಿ ಜಾತ್ರೆ ಉತ್ಸವಗಳಲ್ಲಿ ಹೋಮ ಹವನಾದಿಗಳನ್ನು ಮಾಡಿಸುವಲ್ಲಿಯೂ ಸಂಸ್ಕೃತೀಕರಣ ಎದ್ದು ಕಾಣುತ್ತದೆ.

**ಕಲಬೇರಕೀ ಕರಣ**

ಜನಪದ ದೇವತೆಗಳ ಮತ್ತು ಶಕ್ತಿ ದೇವತೆಗಳ ಜಾತ್ರೆಗಳ ಪೂಜಾ ವಿಧಾನಗಳಲ್ಲಿ ಬ್ರಾಹ್ಮಣರ ಪ್ರವೇಶದಿಂದ ಆಚರಣಾ ವಿಧಿನಾಗಳಲೂ, ಪೂಜಾವಿಧಾನಗಳಲ್ಲಿ ಕಲಬೆರಕಿ ಸಂಸ್ಕೃತಿ ಕಂಡು ಬರುತ್ತದೆ. ಕುಮಟಾದ ಹೆಗಡೆ ಶಾಂತಿಕಾಂಬಾ, ಬಾಡದ ಕಾಂಚಿಕಾಂಬಾ ರಥೋತ್ಸವಗಳು ಅಂಕೋಲಾದ ಶಾಂತದುರ್ಗಾ ನವರಾತ್ರಿ ಉತ್ಸವಗಳು, ವನಭೋಜನ ಕಾರ್ಯಕ್ರಮಗಳು ಶಿಷ್ಟ ಸಂಪ್ರದಾಯದಲ್ಲಿ ನಡೆದರೆ ಬಂಡಿ ಹಬ್ಬದ ಆಚರಣೆಯಲ್ಲಿ ಜಾನಪದ ವಿಧಿವಿಧಾನಕ್ಕೆ ಮಹತ್ವ ನೀಡಲಾಗುತ್ತದೆ. ಜಿಲ್ಲೆಯ ಬಹುತೇಕ ದೇವಾಲಯಗಳಲ್ಲಿ ಈ ಬಗೆಯ ಪೂಜಾ ವಿಧಾನವಿದೆ. ಅಂಕೋಲಾ, ಕುಮಾಟ, ಹಿಲ್ಲೂರು, ಹಡವ, ಶಿರಿಶಿಯ ಮಾರಿಕಾಂಬೆ ಜಾತ್ರೆಯಲ್ಲಿ ಜನಪದ ಶೈಲಿಯ ಜಾತ್ರಾ ವಿಧಾನಗಳ ಜೊತೆಗೆ ಕೊನೆಯಲ್ಲಿ ಬ್ರಾಹ್ಮಣರ ಪೂಜೆಯನ್ನು ನೋಡಬಹುದ್ದು.

**ವಾಣ್ಯೀಜಿಕರಣ**

ಇತ್ತೀಚೆಗೆ ಪ್ರಮುಖ ಜಾತ್ರೆ ನಡೆಯುವ ದೇವಾಲಯಗಳಲ್ಲಿ ಅಂಗಡಿಗಳು ಮನರಂಜನೆ ಜಾಗಕ್ಕಾಗಿ ಜಾಗ ಹರಾಜು ಕ್ರಿಯೆಯ ಜಾತ್ರಾ ಸಮೀತಿಯ ನೇತ್ರತ್ವದಲ್ಲಿ ನಡೆಯುತ್ತದೆ, ಇದಕ್ಕಾಗಿ ಹಣಕಾಸು ದೊರೆಯತ್ತದೆ. ಹಿಂದಿನಕಾಲದಲ್ಲಿ ಜಾಗ ಉಚಿತವಾಗಿ ದೊರೆಯುತ್ತಿತ್ತು. ಇಷ್ಟೆಯಲ್ಲದೇ ಇತ್ತಿಚೆಗೆ ಕಲ್ಯಾಣ ಮಂಟಪಗಳು ವಸತಿ ಗ್ರಹಗಳು ಹಣಕಾಸಿನ ಮೂಲವಾಗಿ ಕಂಡು ಬರುತ್ತದೆ. ಬಹುತೇಕ ದೇವಾಲಯಗಳಲ್ಲಿ ಕಲ್ಯಾಣ ಮಂಟಪಗಳು ಕಟ್ಟಿದ್ದು ಕಂಡು ಬರುತ್ತದೆ, ಕಲ್ಯಾಣ ಮಂಟಪದ ವಸತಿ ಗ್ರಹಗಳು ಆದಾಯಗಳನ್ನು ಜಾತ್ರೆಯ ವವ್ಯಸ್ಥೆಯನ್ನು ಅಚ್ಚುಕಟ್ಟಾಗಿ ನಡೆಸಲು

ಅನುಕೂಲವಾಗುತ್ತದೆ. ನಾನು ಗಮನಿಸಿದಂತೆ ಅಂಕೋಲಾ ಲಕ್ಷ್ಮೀ ನಾರಾಯಣ (ಮಹಾಮಾಯ) ದೇವಸ್ಥಾನ, ಶಿರಶಿ ಮಾರಿಕಾಂಬೆ, ಗೋಕರ್ಣದ ಮಹಾಬಲೇಶ್ವರ, ಹೊನ್ನಾವರದ ಇಂಡಗುಂಜಿ, ವಂದಿಗೆಯ ಹೊನ್ನಾರಾಕ, ಶಾಂತದುರ್ಗಾ, ಕುಂಡದೋರಿ, ಆರ್ಯದುರ್ಗಾ ದೇವಾಸ್ಥಾನಗಳಲ್ಲಿ ಕಲ್ಯಾಣ ಮಂಟಪಗಳನ್ನು ನಾನು ಗಮನಿಸಿದ್ದೇನೆ.

**ರಾಜಕಾರಣ**

ಇತ್ತೀಚೆಗೆ ಜಾತ್ರೆಗಳಲ್ಲಿ ರಾಜಕಾರಣಿಗಳು ಜಾತ್ರೆಗಳಲ್ಲಿ ತಮ್ಮ ಪ್ರಭಾವ ಬೀರಲು ಪ್ರಯತ್ನಿಸುತ್ತಾರೆ. ಗ್ರಾಮ ಪಂಚಾಯತಿ ಸದ್ಯಸರಿಂದ ಹಿಡಿದು ಶಾಸಕನವರಿಗೂ ಜಾತ್ರೆಗಳ ಉಸ್ತುವಾರಿಯಿಂದ ಹಿಡಿದು ಮನರಂಜನಾ ಕಾರ್ಯಕ್ರಮಗಳವರೆಗೂ ಸ್ವಾಗತ ಕಮಾನುಗಳಲ್ಲಿ ತಮ್ಮ ಹೆಸರು ಬರುವಂತೆ ನೋಡಿಕೊಳ್ಳುತ್ತಾರೆ. ಇವರು ಪ್ರಚಾರ ಪ್ರಾಬಲ್ಯಗಳಿಗೆ ಜಾತ್ರೆಗಳನ್ನು ಅನುಕೂಲ ಸಿಂಧುವಾಗಿಸಿ ಕೊಂಡಿರುವುದು ಕ್ರೂರವಾಸ್ತವ. ತಮ್ಮ ಮನೆ ದೇವರು ಜಾತಿ ದೇವರುಗಳ ಜಾತ್ರೆಗಳಲ್ಲಿ ಮತ್ತು ಮುಜರಾಯಿ ಇಲಾಖೆಯ ಆಶ್ರಯದಲ್ಲಿ ಜರುಗುವ ಜಾತ್ರೆಗಳಲ್ಲಿ ಈ ರಾಜಕಾರಣಿಗಳು ಸಂಧರ್ಭಕ್ಕೆ ತಕ್ಕ ಮುಖವಾಡದೊಂದಿಗೆ ಮೆರೆಯುವ ರೀತಿ ಅಧ್ಯಯನ ಯೋಗ್ಯವಾಗಿದೆ. ಮುಜರಾಯಿ ಇಲಾಖೆಗೆ ಸೇರಿದ ದೇವಸ್ಥಾನಗಳಿಗೆ ಅಧ್ಯಕ್ಷ, ಕಾರ್ಯದರ್ಶಿ ಇತ್ಯಾದಿ ಅಧಿಕಾರಿಗಳ ನೇಮಕಾತಿಯಲ್ಲಿ ಈ ರಾಜಕಾರಣೆಗಳ ಕೈವಾಡವಿರುತ್ತದೆ. ಚುನಾವಣೆಯ ದೃಷ್ಟಿಯಿಂದ ಜನರ ಮನಸ್ಸನ್ನು ತಮ್ಮ ಕಡೆಗೆ ಮರಳು ಮಾಡಿಕೊಳ್ಳುವ ಎಲ್ಲ ಪ್ರಚಾರೋಪಾಯಗಳೂ ಜಾತ್ರೆಯ ನೇತೃತ್ವವಹಿಸಿದ ಇವರಿಂದ ಪ್ರಯೋಗವಾಗುತ್ತವೆ.

**ವೈಭವೀಕರಣ**

ಇತ್ತಿಚಿನ ಜಾತ್ರೆಗಳಲ್ಲಿ ದೈವರಾಧನೆಗಿಂತ ಜಾತ್ರೆಯ ಬಾಹ್ಯ ಸೌಂದರ್ಯ, ಮನರಂಜನೆ, ವ್ಯಾಪರಗಳ ವೈಭವೀಕರಣ ಕಂಡು ಬರುತ್ತದೆ,ಕೆಲವು ದೇವಾಲಯಗಳು ಭಕ್ತರ ಸಂಖ್ಯೆ ಹೆಚ್ಚಿಸಲು ತಮ್ಮ ದೈವವನ್ನು ಪ್ರಧಾನವೆಂದು ಬಿಂಬಿಸಲು ಈ ರೀತಿ ವೈಭವೀಕರಣ ಮಾಡುತ್ತಾರೆ.ಇದರ ಜೊತೆಗೆ ಆಧುನಿಕ ಸಂದರ್ಭದಲ್ಲಿ ಇತ್ತೀಚೆಗೆ ಹೆಚ್ಚಾಗಿರುವ ಒಂದು ಪೂಜಾ ವಿಧಾನವೆ ವ್ಯಕ್ತಿ ಪೂಜೆ. ದೇವರಂತೆ ಮನುಷ್ಯನನ್ನೇ ಕಾಣುವ ಹೋಲಿಸುವ ಪ್ರವೃತ್ತಿ ಇತ್ತೀಚೆಗೆ ಕಂಡು ಬರುತ್ತದೆ. ದೇವಸ್ಥಾನದಲ್ಲಿ ಸ್ವಾಮಿಗಳು, ಜಗದ್ಗುರುಗಳನ್ನು ಮಠಾಧಿಪತಿಗಳನ್ನು, ಸನ್ಯಾಸಿಗಳನ್ನು ಪೂಜಿಸುವ ರೂಢಿ ಇತ್ತೀಚೆಗೆ ಹೆಚ್ಚಾಗಿದೆ. ಇದರೊಂದಿಗೆ ಹೊಸದಾಗಿ ಉದ್ಭವಿಸಿರುವ ಕಲ್ಕಿ ಭಗವಾನ್,ರವಿ ಶಂಕರ ಗೂರುಜಿ ಮತ್ತು ಅಮ್ಮ ಇಂತಹ ವ್ಯಕ್ತಿಗಳು ದೇವರ ಎತ್ತರಕ್ಕೆ ಏರುತ್ತಿರುವುದನ್ನು ಕಾಣಬಹುದಾಗಿದೆ.ವರ್ಷಕ್ಕೊಮ್ಮೆ ಇವರ ಕುರಿತು ಜಾತ್ರೆ ಉತ್ಸವಗಳು ನಡೆಯುತ್ತವೆ.

**ವೈಜ್ಞಾನೀಕರಣ**

ಇಂದಿನ ಆಧುನಿಕ ಸಂದರ್ಭದಲ್ಲಿ ಯಾವುದೇ ವಿಷಯವಾದರೂ ಅದನ್ನು ವೈಜ್ಞಾನಿಕ ದೃಷ್ಟಿಕೋನದಿಂದ ನೋಡುವ ಬುದ್ದಿ ಹಳ್ಳಿಗರಲ್ಲಿದೆ. ಇದಕ್ಕೆ ಜನಪದ ದೇವರಗಳ ಜಾತ್ರೆಯ ಆಚರಣೆಗಳೂ ಹೊರತಲ್ಲ. ಕೊಂಡ ಹಾಯುವುದು, ಬಾಯಿಬೀಗ, ಸಿಡಿಯಂತಹ ಕೆಲವು ಆಚರಣೆಗಳನ್ನು ವೈಜ್ಞಾನಿಕವಾಗಿ ಪರೀಕ್ಷಿಸುವುದು ಇಂದು ಅನೇಕ ಹಳ್ಳಿಗಳಲ್ಲಿ ಕಾಣಬಹುದು. ಇದಕ್ಕೆ ಅನೇಕ ಕಾರಣಗಳಿವೆ. ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು, ಭಾರತೀಯ ವಿಜ್ಞಾನ ಮಂದಿರ, ಭಾರತ ಜಾನವಿಜ್ಞಾನ ವಿಜ್ಞಾನ ಸಮಿತಿ, ಮುಂತಾದವುಗಳ ಮೂಲಕ ಡಾ. ಎಚ್. ನರಸಿಂಹಯ್ಯ, ಡಾ. ಸಿ. ಆರ್. ಚಂದ್ರಶೇಖರ್, ಡಾ.ಗೋಪಾಲ ದಾಬಡೆ, ಡಾ. ಪ್ರಕಾಶ್ ಸಿ. ರಾ ವ್., ಡಾ. ಎಸ್.ಜೆ. ನಾಗಲೋಟಿ ಮಠ, ನರೇಂದ್ರ ನಾಯಕ್ ಮತ್ತಿತರ ವ್ಯಕ್ತಿಗಳು ಗ್ರಾಮೀಣ ಪ್ರದೇಶದಲ್ಲಿ ಹಳ್ಳಿಯ ಜನರ ಜಾಗೃತಿಗಾಗಿ ನಡೆಸಿದ ಪವಾಡ ರಹಸ್ಯ ಬಯಲು, ಭಾನಾಮತಿ, ಪರಿಸರ ಸಂರಕ್ಷಣೆ, ಸ್ತ್ರೀ ಸಾಕ್ಷರತೆಯಂಥ ಕಾರ್ಯಕ್ರಮಗಳು ಜನರ ಮೇಲೆ ಒಳ್ಳೆಯ ಪರಿಣಾಮ ಬೀರಿವೆ. ಕೆಲವು ಜಿಲ್ಲೆಯ ಸಂಪೂರ್ಣ ಸಾಕ್ಷರತಾ ಕಾರ್ಯಕ್ರಮ ಹಾಗೂ ಇದರ ಮುಂದುವರಿದ ಯೋಜನೆಗಳು ಜನರಲ್ಲಿ ಜಾಗೃತಿಯನ್ನು ಮೂಡಿಸುವಲ್ಲಿ ನಿರಂತರ ಪರಿಶ್ರಮವಹಿಸಿವೆ. ಹೀಗಾಗಿ ಪ್ರಾಣಿ ಬಲಿ, ಬಂಡಿಸಿಡಿ, ಎಂಜಲೆ ಎಲೆಯ ಮೇಲೆ ಹೊರಳಾಡುವದು ಮುಂತಾದ ಆಚರಣೆಗಳಲ್ಲಿ, ಜನ ಪರೀಕ್ಷಿಸಿ ನೋಡುತ್ತಾರೆ. ಕಾರಣ ಕೆಲವ ಜಾತ್ರೆಗಳಲ್ಲಿ ದೈವ ನಂಬಿಕೆ ಮೂಢನಂಬಿಕೆ ಕಡಿಮೆಯಾಗಿದೆ.ಉದಾ; ಅವರ್ಸಾದ ಹಟ್ಟಿಕೇರಿಯಲ್ಲಿ ಎಂಜಲು ಎಲೆಯ ಮೇಲೆ ಹೊರಳಾಡುವುದನು ಪ್ರಗತಿ ಪರ ಸಂಘಟನೆಗಳು ತಡೆ ಹಿಡಿದಿದ್ದಾರೆ.

ವೈಜ್ಞಾನಿಕ ದೃಷ್ಟಿಕೋನದಿಂದ ಪರೀಶಿಲಿಸಿ ನೋಡಿದ್ದಾಗ ಸರಕಾರದಿಂದ ಕೆಲವು ಆಚರಣೆಗಳು ನಿಷೇಧಕ್ಕೆ ಒಳಗಾಗಿರುವುದೂ ಜಾತ್ರೆಗಳಲ್ಲಿ ಬದಲಾವಣಿ ಕಂಡು ಬರಲು ಒಂದು ಕಾರಣವಾಗಿದೆ. ಹಳ್ಳಿಗರು ಇಷ್ಟ ದೇವತೆಯ ಸೇವೆಯನ್ನು ನಡೆಸುವುದನ್ನು ಬಿಟ್ಟು ವೈಜ್ಞಾನಿಕವಾಗಿ ತಮ್ಮನ್ನು ತಾವು ಪರೀಕ್ಷಿಸಿಕೊಳ್ಳಲು ಕಾರಣ ಬಲಿ, ಮದ್ಯಸೇವನೆ, ಬೆತ್ತಲೆಸೇವೆ, ಬೆತ್ತಲೆನೃತ್ಯ, ತಾಂತ್ರಿಕ, ವಾಮಾಚಾರದಂತಹ ಆಚರಣೆಗಳು ನಿಷೇಧಕ್ಕೆ ಒಳಪಟ್ಟಿರುವುದೇ ಆಗಿದೆ. ಇದರೊಂದಿಗೆ ಜಾತ್ರೆಗಳಿಗೆ

ಸಂಬಂಧಿಸಿದಂತೆ ಅನೇಕ ವಿಧಿ–ನಿಷೇಧಗಳು ಇರುವುದರಿಂದ ಅವುಗಳನ್ನು ಪಾಲಿಸಿಕೊಂಡು ಸೇವೆ ನಡೆಸುವುದು ಕಷ್ಟ ಸಾಧ್ಯವಾಗಿರುವುದೇ ಕಾರಣ ಇತ್ತೀಚೆಗೆ ಸ್ವಲ್ಪ ಮಟ್ಟಿಗೆ ಜಾತ್ರೆಗಳು ತಮ್ಮ ಪ್ರಾಬಲ್ಯ ಕಳೆದುಕೊಳ್ಳುತ್ತಿರವಂತೆ ಜಾತ್ರೆಯ ಆಚರಣೆಗಳಲ್ಲಿ ಬದಲಾವಣೆ ಭಾಸವಾಗುತ್ತದೆ. ಇತ್ತೀಚೆಗೆ ಅಂಕೋಲಾ ಹಟ್ಟಿಕೇರಿಯ ನಾಗಯಲ್ಲಮನ ದೇವಸ್ಥಾನದಲ್ಲಿ ಕೋಳಿ ಕುರಿಯಂತಹ ಪ್ರಾಣಿಬಲಿಯನ್ನು ನಿಷೇಧಿಸಲಾಗಿದೆ.

**ಜಾಗತೀಕರಣ**

ಜಾಗತೀಕರಣದ ಪ್ರಭಾವದಿಂದ ಹಳ್ಳಿಗಳು ಪಟ್ಟಣ ಪ್ರದೇಶದೊಳಗೆ ಸೇರಿ ತಮ್ಮ ಅಸ್ತಿತ್ವವನ್ನು ಕಳೆದುಕೊಳ್ಳುತ್ತಿರುವುದಲ್ಲದೆ, ನಗರ ಪ್ರದೇಶದ ಒಡನಾಟದಿಂದ ತಮ್ಮ ಸಂಪ್ರದಾಯ ಹಾಗೂ ಸಾಂಸ್ಕೃತಿಕ ಪರಂಪರೆಯಲ್ಲೂ ಕೆಲವು ವ್ಯತ್ಯಾಸಗಳನ್ನು ಕಂಡುಬರುತ್ತಿದೆ. ಅನೇಕ ಹಳ್ಳಿಗಳು ನಗರದ ಆಡಂಬರಕ್ಕೆ ಒಳಗಾಗಿ ತಮ್ಮ ಮೂಲ ಸ್ವರೂಪದಲ್ಲೇ ಬದಲಾವಣೆಯನ್ನು ಪಡೆದುಕೊಳ್ಳುತ್ತಿವೆ. ಹೀಗೆ ಹಳ್ಳಿಗಳೂ ನಗರೀಕರಣಕ್ಕೆ ಒಳಗಾಗುತ್ತಿರುವುದರಿಂದ ನಗರದ ಹೊಸ ಪಂಥ, ಹೊಸ ದೇವರುಗಳೊಂದಿಗೆ ತಮ್ಮನ್ನು ಗುರುತಿಸಿಕೊಳ್ಳುತ್ತಿವೆ. ಹಾಗಾಗಿ ಜಾತ್ರೆಗಳ ಅಸ್ತಿತ್ವದಲ್ಲಿ ಗಮನಾರ್ಹವಾದ ಬದಲಾವಣೆಗಳು ಕಾಣುತ್ತಿವೆ. ಕಾರಣ ಪರೋಕ್ಷವಾಗಿ ಜಾತ್ರೆಯ ಮೇಲೆ ಪರಿಣಾಮ ಬೀರುತ್ತದೆ.

ನಗರ ಪ್ರದೇಶದೊಳಗೆ ಹಳ್ಳಿಗಳು ಸೇರಿಕೊಳ್ಳುತ್ತಿರುವುದರೊಂದಿಗೆ ಅನೇಕ ಸ್ಥಳಗಳಲ್ಲಿ ತಮ್ಮ ಇರುವಿಕೆಯನ್ನು ಕಳೆದುಕೊಳ್ಳುತ್ತಿವೆ. ನಗರದ ಕಡೆಗೆ ಇಲ್ಲವೆ ಸ್ವದೇಶದ ಇತರ ಪಟ್ಟಣಗಳ ಕಡೆಗೆ ಮತ್ತು ಹೊರ ರಾಷ್ಟ್ರಗಳ ಕಡೆಗೆ ಜನರು ವಲಸೆ ಹೋಗುತ್ತಿರುವುದು ಮತ್ತೊಂದು ಕಾರಣ. ಕೆಲವೊಮ್ಮೆ ಉದ್ಯೋಗವೂ ಕಾರಣವಾಗಿದೆ. ಹೀಗೆ ಇರುವಿಕೆಯನ್ನು ಕಳೆದುಕೊಂಡಾಗ ಅಲ್ಲಿನ ಆಚಾರ ವಿಚಾರಗಳೊಂದಿಗೆ ದೇವರು ಸಹಾ ಇಲ್ಲದಾಗುತ್ತದೆ. ಪರಕೀಯ ಸಂಸ್ಕೃತಿಯ ಪ್ರಭಾವ ಬೀರುತ್ತದೆ.

ಕೆಲವು ಕಾರಣಗಳಿಗಾಗಿ ಜನರು ತಮ್ಮ ಹಳೆಯ ಸಂಪ್ರದಾಯಗಳನ್ನು ಬಿಡಲೂ ಆಗದೆ ಇತ್ತ ಹೊಸ ಸಂಪ್ರದಾಯಗಳನ್ನು ಸ್ವೀಕರಿಸಲೂ

ಆಗದೆ ಇಕ್ಕಟ್ಟಿನಲ್ಲಿ ಸಿಕ್ಕಿಬಿದ್ದಿದ್ದಾರೆ. ಕೆಲವು ಸಂದರ್ಭಗಳಲ್ಲಿ ನಿಧಾನವಾಗಿ ಹೊಸವಿಧಾನಗಳಿಗೆ ಹೊಂದಿಕೊಳ್ಳಲು ಪ್ರಯತ್ನಿಸಿದರೂ ಹಳೆಯ ಆಚಾರಗಳು ಅವರನ್ನು ಬಿಟ್ಟು ಕೊಡುವುದಿಲ್ಲ. ಕೆಲವು ಬಾರಿ ಹಳೆಯದು ಹೆಚ್ಚೆಂದರೆ ಮತ್ತೆ ಕೆಲವು ಬಾರಿ ಹೊಸದಕ್ಕೆ ಆಕರ್ಷಿತರಾಗುತ್ತಾರೆ. ಅಲ್ಲದೆ ಕೆಲವು ಆಚಾರಗಳ ಬಗ್ಗೆ ಜನರಲ್ಲಿ ಕಾಡುತ್ತಿರುವ ಕೀಳರಿಮೆ ಭಾವ ಅವರ ದ್ವಂದ್ವ ನಡವಳಿಕೆಗೆ ಕಾರಣವಾಗಬಹುದು

ಒಂದು ಕಾಲದಲ್ಲಿ ಸರಕಾರ ಅಥವಾ ಖಾಸಗಿ ಆಸ್ಪತ್ರೆಗಳ ಸೌಲಭ್ಯ ಹಳ್ಳಿಯ ಜನರಿಗೆ ದೊರಯುತ್ತಿರಲ್ಲಿಲ್ಲ, ಸಾರಿಗೆ ವ್ಯವಸ್ಥೆ ಅಥವಾ ರಸ್ತೆ ಸಂಪರ್ಕ ಇಂದಿನಂತೆ ಇರಲ್ಲಿಲ ಕಾರಣ ಯಾವದೇ ರೋಗ ರುಜಿನಗಳು ಬಂದಾಗ ಮುಗ್ಧರಾಗಿದ್ದ ಜನರು ಎಲ್ಲಾ ಸಮಸ್ಯೆಗಳನ್ನು ನಿವಾರಿಸುವುದು ದೇವರೆ ಎಂದು ನಂಬಿ ತಮ್ಮ ಸಮ್ಯಸೆ ಪರಿಹಾರಕ್ಕಾಗಿ ಜಾತ್ರೆ, ಉತ್ಸವ, ಹಬ್ಬಗಳಲ್ಲಿ ಹರಕೆ ಹೊತ್ತು ಕೊಳ್ಳುತ್ತಿದ್ದರು ಆದರೆ ಈಗ ವ್ಯಾವಹಾರಿಕ ಜ್ಞಾನ ಹೆಚ್ಚಿದರಿಂದ ಎಲ್ಲವನ್ನು ವೈಜ್ಞಾನಿಕ ವಿಧಾನಗಳಿಗೆ ಅಳವಡಿಸಿ ನೋಡುವ ಪ್ರವೃತ್ತಿ ಬೆಳೆದಿದೆ. ಒಂದು ಕಾಲದಲ್ಲಿ ದನಗಳಿಗೆ ರೋಗ ಬಂದರೆ ದೇವಾಲಯಕ್ಕೆ ಹೋಗಿ ಹರಕೆ ಹೊತ್ತು, ದೀಪಗಳನ್ನು ಬೆಳಗುತ್ತಿದ್ದ ಜನರು ಇಂದು ಪಶು ವೈದ್ಯಕೀಯ ಆಸ್ಪತ್ರೆಗೆ ಹೋಗುವುದನ್ನು ಕಾಣಬಹುದು. ಕಾರಣ ವ್ಯಾವಹಾರಿಕ ಜ್ಞಾನ ಅಥವಾ ಶಿಕ್ಷಣದ ಮೂಲಕ ಪ್ರಾಪ್ತವಾದ ಸಾಮಾಜಿಕ ಎಚ್ಚರ, ಬೇರೆಬೇರೆ ಮಾಧ್ಯಮಗಳು ಮೂಡಿಸುತ್ತಿರುವ ಎಚ್ಚರಗಳೂ ದೇವರಲ್ಲಿ ಹರಕೆ ಹೊರುವವರ ಮನಸ್ಥಿತಿ ಬದಲಾಗಲು ಕಾರಣವಾಗಿದೆ.

ಆಧುನಿಕ ಬದುಕಿನ ಒತ್ತಡದ ಪರಿಣಾಮ, ನೈತಿಕತೆಯಿಲ್ಲದ ಆಧುನಿಕ ಶಿಕ್ಷಣ ಪದ್ದತಿ. ಹಣಗಳಿಸುವ ಸುಲಭ ವಿಧಾನ, ಐಷರಾಮಿ ಜೀವನದ ಪರಿಣಾಮ ಆಧುನೀಕರಣದ ಪ್ರಭಾವದಿಂದ ನಮ್ಮ ಪೂರ್ವಿಕರು ಆಚರಿಸುತ್ತಿದ್ದ ಅನೇಕ ಆಚಾರ ವಿಚಾರಗಳು ಇಂದು ಬುಡಮೇಲಾಗುತ್ತಿದೆ. ಸಮಾಜದಲ್ಲಿ ನೈತಿಕತೆ ಮತ್ತು ಒಳಿತಿನ ಉಳಿವಿಗಾಗಿ ಹಿರಿಯರು ರೂಪಿಸಿದ ನಿಯಮಗಳು ಮತ್ತು ಆಚರಣೆಗಳು ಇಂದು ತಮ್ಮ ಅಸ್ತಿತ್ವವನ್ನು ಕಳೆದುಕೊಳ್ಳುತ್ತಿವೆ. ಇಂದಿನ ಆಧುನಿಕತೆಯ ವೇಗಕ್ಕೆ ಹೊಂದಿಕೊಳ್ಳಲು ಪ್ರಯತ್ನಿಸುತ್ತಿರುವ ಯುವಪೀಳಿಗೆ ಸಮಾಜದ ರೀತಿ, ನೀತಿ, ಸಂಪ್ರದಾಯಗಳನ್ನು ಜಾತ್ರೆ, ಉತ್ಸವ, ಹಬ್ಬಗಳನ್ನು ಆಚರಿಸಲು ಆಸಕ್ತಿಯಿರುವದಿಲ್ಲ. ದೇವರು, ಧರ್ಮ, ಆಚಾರಗಳು ಒಂದು ಹಂತದವರೆಗೆ ಸ್ವಲ್ಪ ಮಟ್ಟಿಗೆ ಸರಿ ಎಂದು ತಿಳಿದು ಅದನ್ನು ನಡೆಸಿಕೊಂಡು ಬರುತ್ತಾರೆ. ಹಾಗೆಂದ ಮಾತ್ರಕ್ಕೆ ಮರೆತಿದ್ದಾರೆಂದಲ್ಲ. ತಮ್ಮ ಶಕ್ತ್ಯಾನುಸಾರ ದೇವರ ಸೇವೆಗೆ ತಮ್ಮನ್ನು ತೊಡಗಿಸಿಕೊಂಡು, ಅನಂತರ ಇಂದಿನ ವಾಸ್ತವ ಬದುಕಿನೆಡೆಗೆ ಮುಖ ಮಾಡುತ್ತಾರೆ. ಇವರು ಕೆಲವೊಮ್ಮೆ ಧಾರ್ಮಿಕ ಶ್ರದ್ಧೆಯನ್ನು ಕಳೆದುಕೊಳ್ಳುವುದೂ ಉಂಟು. ಈ ಹಿನ್ನೆಲೆಯಲ್ಲಿ ಇಂದು ಮೌಲ್ಯಗಳ ಘರ್ಷಣೆಗೆ ಒಳಗಾಗುತ್ತಿದ್ದಾರೆ. ಇವರ ಬದುಕು ಸಂಕೀರ್ಣದತ್ತ ಹೆಜ್ಜೆ ಹಾಕುತ್ತಿದೆ. ಇಂದು ಹಳ್ಳಿ ಜನರು ಸಹ ಕೆಲವಡೆ ಆಧುನಿಕತೆಯ ಪ್ರಭಾವಕ್ಕೆ ಒಳಗಾಗಿ ತಮ್ಮ ಸಂಸ್ಕೃತಿಯನ್ನು ಕಳೆದುಕೊಳ್ಳುತ್ತಿರುವುದನ್ನು ಕಾಣಬಹುದು. ಆಧುನಿಕ ಪ್ರಪಂಚದಲ್ಲಿ ಜೀವನಕ್ಕೆ ಚೈತನ್ಯವನ್ನು ಕೊಡುವ ಅಂಶಗಳನ್ನು ಬಿಟ್ಟು ಪರ ಸಂಸ್ಕೃತಿಯ ಪ್ರವಾಹದಲ್ಲಿ ತೇಲಿಹೋಗುತ್ತಿರುವ ಇಂದಿನ ಸಂದರ್ಭದಲ್ಲಿ ಜಾನಪದ ಸಂಸ್ಕೃತಿಯ ಉಳಿವು ಪ್ರಶ್ನೆಯಾಗಿದೆ. ಪರಸಂಸ್ಕೃತಿಯ ಪ್ರಭಾವದಿಂದ ದೂರ ಉಳಿದು ತಮ್ಮ ಪ್ರಾಬಲ್ಯವನ್ನು ರಚಿಸುವಲ್ಲಿ ನಮ್ಮ ಭಕ್ತಿ ಹಾಗೂ ಅವುಗಳ ಆಚರಣೆಗಳು ಪ್ರಮುಖವಾದ ಪಾತ್ರ ವಹಿಸಬೇಕು. ಆದರೆ ಪರಸಂಸ್ಕೃತಿಯ ಪ್ರಭಾವದಿಂದ ರಕ್ತಗತವಾದ ತಮ್ಮ ಸಂಸ್ಕೃತಿಯನ್ನು ಉಳಿಸಿಕೊಳ್ಳುವ ಪ್ರಯತ್ನವನ್ನು ನಾವು ಇನ್ನೂ ಹೆಚ್ಚಾಗಿ ಮಾಡಬೇಕಾಗಿದೆ.

ಆಧುನಿಕ ಯುಗಕ್ಕೆ ತಕ್ಕಂತೆ ಹೆಜ್ಜೆಯನ್ನು ಹಾಕುತ್ತಿರುವ ಮಾನವ ತನ್ನ ಮೂಲಭೂತ ಸೌಕರ್ಯಗಳಿಂದ ಹಿಡಿದು ನಂಬಿಕೆ, ಆಚಾರ ವಿಚಾರಗಳಿಗೆ ತನಗೆ ಬೇಕೆನಿಸಿದಂತೆ ಬದಲಾವಣೆಯನ್ನು ಮಾಡಿಕೊಳ್ಳುತ್ತಿದ್ದಾನೆ. ಇದಕ್ಕೆ ಭಕ್ತಿಯೂ ಹೊರತಾಗಿಲ್ಲ. ಬಹುತೇಕ ಗಂಟೆಗಟ್ಟಲೆ ಕುಳಿತು ಪೂಜೆಯನ್ನು ಸಲ್ಲಿಸುತ್ತಿದ್ದ ಮಾನವ ಇಂದಿನ ಯುಗಧರ್ಮಕ್ಕೆ ತಕ್ಕಂತೆ ದೇವರಿಗೆ ಸೇವೆಯನ್ನು ಸಲ್ಲಿಸುವ ವಿಧಾನವನ್ನು ಬದಲಾಯಿಸಿಕೊಂಡಿದ್ದಾನೆ. ತನಗೆ ಬೇಕೆನಿಸಿದಾಗ ದೇವರಿಗೆ ಪೂಜೆ ಸಲ್ಲಿಸುವ, ತನ್ನ ಇಚ್ಛೆಗಳು ಫಲಿಸದಿದ್ದರೆ ಪಲಾಯನಗೈಯುವ ನಡವಳಿಕೆಯಿಂದ ಇಂದು ಕೆಲವಕಡೆ ಜಾತ್ರೆಯ ಆಚರಣೆಗಳಲ್ಲಿ ಪ್ರಾಮುಖ್ಯತೆ ಕಡಿಮೆಯಾಗಿದೆ.

ಹಿಂದಿನ ಕಾಲದಲ್ಲಿ ಊರುಗಳಲ್ಲಿ ‘ೇವಾಲಯಗಳೇ ಸಾಮಾಜಿಕ ಸಮಗ್ರತೆಯ ಸಂಕೇತವಾಗಿತ್ತು. ದೇವಾಲಯಗಳೇ ಜರುಗುವ ಜಾತ್ರೆ, ನೇಮ, ದರ್ಶನ, ನ್ಯಾಯನಿರ್ಣಯಗಳು ಊರುಗಳಲ್ಲಿ ಕೊಂಡಿಗಳನ್ನು ಬೆಸೆಯುತ್ತಿದ್ದವು. ಇಂಥ ಸಂದರ್ಭಗಳಲ್ಲಿ ಊರುಗಳಲ್ಲಿ ಪ್ರಮುಖರು ಹಾಗೂ ಅನೇಕ ಪಂಗಡಗಳ ಹಿರಿಯರು ಅಲ್ಲಿ ಹಾಜರಿದ್ದು ದೇವಾಲಯಗಳೇ ಸಾಮಾಜಿಕ ಮಹತ್ವವನ್ನು ಹೆಚ್ಚಿಸುತ್ತಿದ್ದರು. ಈಗ ಧಾರ್ಮಿಕ ದೃಷ್ಟಿಯಲ್ಲಿ ಮಾತ್ರವಲ್ಲ ಆರ್ಥಿಕ, ಸಾಮಾಜಿಕ, ರಾಜಕೀಯ ದೃಷ್ಟಿಗಳಲ್ಲೂ ಹಿಂದಿನ ಜನರ ವ್ಯವಸ್ಥೆಗಳು ಇರುವಿಕೆ ಕಳೆದುಕೊಂಡಿವೆ. ಹೀಗೆ ಊರಿನ ಕಟ್ಟುಪಾಡುಗಳು ಇರುವಿಕೆ ಕಳೆದುಕೊಂಡಾಗ ಊರನ್ನು ಪ್ರತಿನಿಧಿಸುವ ದೇವರು ದೈವರಾಧನೆಯಲ್ಲಿ ನಡೆಯವ ಜಾತ್ರೆ ಆಚರಣೆಗಳು ಕಡಿಮೆಯಾಗುವ ಸಂದರ್ಭವುಂಟು.

**ಸಂಪ್ರದಾಯೀಕರಣ**

ಇಂದಿಗೂ ಶಿರಿಶಿಯ ಮಾರಿ ಜಾತ್ರೆಯಲ್ಲಿ ಕೋಣನ ಬಲಿ ನಿಂತರೂ ಅದರ ರಕ್ತ ತೆಗೆದುಕೊಳ್ಳುವ ಬದಲಿ ಸಂಪ್ರದಾಯ, ಬತ್ತಲೆ ಸೇವೆ ಬದಲು ಬೇವಿನ ಉಡುಗೆ ಸಂಪ್ರದಾಯ, ಕೆಲವಡೆ ಸಿಡಿ ಕಂಬಕ್ಕೆ ಮನುಷ್ಯರನ್ನು ಸಿಕ್ಕಿಸುವ ಸಂಪ್ರದಾಯ ಜೀವಂತವಿದ್ದರೂ ಇತ್ತೀಚಿಗೆ ಹಣ್ಣು –ಹಂಪಲ ತರಕಾರಿ ಸಿಕ್ಕಿಸುವ ಬದಲಾದ ನಿಯಮಗಳಿವೆ. ಬಂಡಿ ಜಾತ್ರೆಯಲ್ಲಿ ಬಂಡಿಗೆ ಹಣ್ಣು –ಹಂಪಲ ತರಕಾರಿ ಸಿಕ್ಕಿಸುವ ಪದ್ದತಿಯಿದೆ.ಇಂದಿನ ಆಧುನಿಕ ಸೌಲಭ್ಯ ಹೊಂದಿರುವ ಈ ಸಂಧರ್ಭದಲ್ಲಿಯೂ ಹಳೆಯ ಸಂಪ್ರದಾಯವನ್ನು ಪಾಲಿಸುತ್ತಾರೆ. ಜಾತ್ರೆಯಲ್ಲಿ ಹಿಂದೆ ನಡೆದುಕೊಂಡು ಅಥವಾ ಚಕ್ಕಡಿ ಗಾಡಿಯಲ್ಲಿ ಜಾತ್ರೆಗೆ ಪ್ರಯಾಣ ಮಾಡುತ್ತಿದ್ದರು.ಆದರೆ ಇಂದು ಸಹ ಪ್ರಮುಖ ಜಾತ್ರೆ ನಡೆಯವ ಉಳವಿ ಚನ್ನಬಸವೇಶ್ವರ ಜಾತ್ರೆ. ಶಿರಿಶಿ ಮಾರಿಕಾಂಬೆ, ಯಲ್ಲಾಪುರ ಗ್ರಾಮದೇವಿ ಗೋಕರ್ಣದ ಶಿವರಾತ್ರಿ ಜಾತ್ರೆಯಲ್ಲಿ ಸರಕಾರಿ ವಾಹನದ ವವ್ಯಸ್ಥೆಯನ್ನು ಮಾಡಲಾಗುತ್ತದೆ. ಆದಕಾರಣ ದೂರದ ಪ್ರಯಾಣಕರಿಗೆ ಅನೂಕೂಲವಾಗುತ್ತದೆ ಆದರೂ ಹಳೆಯ ಪದ್ಧತಿ ಮುಂದುವರಿಸಿಕೊಂಡು ಬರುವ ಜನರು ಇದ್ದಾರೆ.

**ವರ್ಣಭೇಧ**

ಬಂಡಿ(ಕಲಶ)ಜಾತ್ರೆಗಳಲ್ಲಿ, ಮಾರಿ ಜಾತ್ರೆ, ತೇರು, ರಥೋತ್ಸವ, ಪಲ್ಲಕ್ಕಿ ಪ್ರಧಾನ ಜಾತ್ರೆಗಳ ಸ್ವರೂಪವನ್ನು ಗಮನಿಸಿದಾಗ ವರ್ಣಭೇಧ ನೀತಿಯು ಹಿಂದೆಯೇ ಇತ್ತು ಎನ್ನುವದು ಜಾತ್ರೆಯ ಸಂದರ್ಭದಲ್ಲಿ ಇರುವ ಆಚರಣಾ ವಿಧಿಯಿಂದಲೇ ಕಂಡುಬರುತ್ತದೆ. ಏಕೆಂದರೆ ಇಂದು ಸಹ ಕರವಾಳಿಯ ಬಂಡಿ ಹಬ್ಬದ ಆಚರಣೆಗಳಲ್ಲಿ ದಂಡಿನ ಬೆಡ್ತಿ, ಕುಂಟ ಬೆಡ್ತಿ, ಎಂಬ ಕೆಳವರ್ಗದ ದೇವಾಲಯಗಳಿದ್ದು ಮುಖ್ಯ ಗುಡಿಯ ಹೊರಗೆ ಕಟ್ಟಡವಿಲ್ಲದ ಕಲ್ಲಿನ ಶಿಲೆಗಳಾಗಿದ್ದು (ಇತ್ತೀಚೆಗೆ ಮೂರ್ತಿಗಳು ಹೊಸದಾಗಿ ಇವೆ) ಇವುಗಳ ಪೂಜಾರಿಗಳು ದಲಿತರಾಗಿದ್ದು ಈ ಹಬ್ಬದ ಆಚರಣೆಯಲ್ಲಿ

ಇವರು ಪ್ರತ್ಯೇಕವಾಗಿ ಉಳಿದವರಿಂದ ಗುರುತಿಸಲ್ಪಡುತ್ತಾರೆ. ಅಷ್ಟೇ ಅಲ್ಲದೆ ಇತರ ಕಟ್ಟಗೆದಾರರು ಇವರನ್ನು ಕರೆದಾಗ ಮಾತ್ರ ಬರುವದು ಮತ್ತು ಕಲಶ ಉಯ್ಯಾಲೆ ಚಪ್ಪರ ಏರುವಾಗ ಇವರನ್ನು ಬಿಟ್ಟು ಎಲ್ಲರೂ ಉಲಿಚಪ್ಪರ ಏರುತ್ತಾರೆ. ಈ ದೇವರ ಕಟ್ಟಿಗೆದಾರ ಮಾತ್ರ ಉಲ್ಲಿ ಚಪ್ಪರ ಏರಲು ಅವಕಾಶವಿಲ್ಲ ಅಂಕೋಲೆಯ ಬಂಡಿ ಹಬ್ಬದ ಸಂದರ್ಭದಲ್ಲಿ ಈ ಘಟನೆಯನ್ನು ಕುರಿತು ಶಾಂತರಾಮಹುಲಸ್ವಾರನ್ನು ಕೇಳಿದ್ದಾಗ ನಿಮಗೆ ಅವಕಾಶವಿಲ್ಲದೆ ಇರುವದು ನಿಮಗೆ ಅವಮಾನವಾಗುದಿಲ್ಲವೆ ಎಂದು ಪ್ರಶ್ನಿಸಿದರೆ ಹಾಗೇನು ಇಲ್ಲ ಮೇಲಿ ಹತ್ತಿಯಿರುವ ಎಲ್ಲರನೂ ಕಾಯುವ ಕೆಲಸ ನಾನು ಮಾಡುತ್ತೇನೆ (ಆತ ಕಟ್ಟಿಗೆ ಹಿಡಿದ ದೇವರು ಮಾಡುತ್ತದೆ ಎಂದರ್ಥ) ಅದರಿಂದಲೇ ಕೆಳಗೆಯಿದ್ದು ಮೇಲೆ ಏರಿರುವವರನ್ನು ರಕ್ಷಣೆ ಮಾಡುತ್ತೇನೆ. ಕೆಳಗಿನಿಂದಲೇ ದೂರದಿಂದ ಪ್ರತ್ಯೇಕವಾಗಿ ವಿಕ್ಷೀಸುವ ಈತ ಈ ರೀತಿ ಸಮಾಧಾನದಿಂದ ಮತ್ತು ಹೆಮ್ಮೆಯಿಂದ ತಾರತಾಮ್ಯದ ಬಗ್ಗೆಗೆ ಉತ್ತರಿಸುತ್ತಾನೆ. ಇನ್ನೂ ಇದಕ್ಕೆ ಮತ್ತೊಂದು ಉದಾಹರಣೆ ಮಾರಿ ಜಾತ್ರೆ. 'ಎಲ್ಲ ದೇವತೆಗಳಿಗೂ ಇರುವಂತೆ ಮಾರಿಯ ಹಿನ್ನೆಲೆಯಲ್ಲಿ ಅವಳ ಮೂಲವನ್ನು ಕುರಿತಂತೆ ಪುರಾಣವೊಂದು ಸೃಷ್ಟಿಯಾಗಿದೆ. ಇದರ ಪ್ರಕಾರ ಅವಳದೊಂದು ಅಂತರ್ಜಾತಿಯ ವಿವಾಹ ಅದೊಂದು ಘೋರವಾದ ಪಾಪವೆಂದು ಪರಿಗಣಿಸುತ್ತಿದೆ ಕಾಲದಲ್ಲಿ ಬ್ರಾಹಣಕನ್ಯೆಯಾದ ಈಕೆಯನ್ನು ಹೊಲೆಯನೊಬ್ಬ ನಂಬಿಸಿ ಮದುವೆಯಾದ. ಅವರಿಗೆ ಒಂದು ಎರಡು ಮಕ್ಕಳೂ ಆದವು. ಕ್ರಮೇಣ ನಿಜಸಂಗತಿ ಆಕಸ್ಮಿಕವಾಗಿ ಅವಳಿಗೆ ತಿಳಿದು ಗಂಡನ ಮೇಲೆ ರೌದ್ರಾವತಾರ ತಾಳಿ ಮುಂದೆ ಆತನ ಮೇಲೆ ಭಯಂಕರ ಸೇಡು ತೀರಿಸಿಕೋಳ್ಳುವುದಾಗಿ ಪ್ರತಿಜ್ಞೆಗೈದು ಅಗ್ನಿಪ್ರವೇಶ ಮಾಡಿದಳು. ಮುಂದಿನ ಜನ್ಮದಲ್ಲಿ ಆಕೆ ಮಾರಿಯಾಗಿ ಹುಟ್ಟಿ ಸುಳ್ಳು ಹೇಳಿ ಮೋಸ ಮಾಡಿದ್ದ ಗಂಡನ ಮೇಲೆ ಸೇಡು ತೀರಿಸಿಕೊಂಡಳು. ಇಂದಿಗೂ ಮಾರಿ ಜಾತ್ರೆಯ ಸಂಧರ್ಭದಲ್ಲಿ ಬಲಿಯ ಆಚರಣೆಯನ್ನು ಕಡ್ಡಾಯವಾಗಿ ಪಾಲಿಸಿಕೊಂಡು ಬರುತ್ತಿರುವುದನ್ನು ಕಾಣಬಹುದು. ಕೋಣವನ್ನು ಕಡಿದು ಆದರ ರಕ್ತವನ್ನು ಬಿಳಿಸಿದ ಮೇಲೆಯೇ ಮಾರಮ್ಮನಿಗೆ ಶಾಂತಿ ಎನ್ನುವ ಪ್ರತೀತಿಯೂ ಇದೆ. ಮಾರಿಯ ಸೇಡು ತಪ್ಪು ಮಾಡಿದ ಹೊಲೆಯನ ಪ್ರತಿರೂಪದ ಕೋಣ ಬಲಿಯನ್ನು ಒಪ್ಪಸಿಕೊಂಡಂತೆ ಶಾಂತವಾಗುತ್ತದೆ. ಮಾರಿ ಜಾತ್ರೆಯಲ್ಲಿ ಈ ಘಟನೆಯ ಪುನರಭಿನಯ ವರ್ಷಪ್ರತಿ ಆಚರಿತವಾಗುತ್ತದೆ. ಚಾತುರ್ವರ್ಣ ನೀತಿಯನ್ನು ಧಾರ್ಮಿಕ ಭೀತಿಯ ಹಿನ್ನಲೆಯಲ್ಲಿ ಬೇರೂರಿಸುವ ಗಟ್ಟಿಗೂಳಿಸುವ ಆಚರಣಾ ವಿಧಿ ಈ ಮಾರಿ ಜಾತ್ರೆ. ಅನ್ಯಸಂಸ್ಕೃತಿಯೊಂದು ತನ್ನ ಮೇಲೆ ಹೇರಿದ ಆಕ್ರಮಣಶೀಲ ನೀತಿ ತತ್ವವನ್ನೇ ಶ್ರದ್ಧಾಭಕ್ತಿಗಳ ಆಚರಣಾ ವಿಧಿಯಾಗಿಸಿಕೊಂಡು ಬಾಳು ಹೊರೆಯುವ ಕೆಳ ಸಮಾಜಗಳ ಬದುಕಿನ ದುರಂತ ವ್ಯಂಗ್ಯಕ್ಕೆ ಒಂದು ಕೈಗನ್ನಡಿ ಈ ಮಾರಿ ಜಾತ್ರೆ.

ಕರವಾಳಿ ತಾಲೂಕಿನ ಬಹುತೇಕ ಬಂಡಿ ಹಬ್ಬದ ಜಾತ್ರೆಯಲ್ಲಿ ಆರಾಧನೆಗೆ ಒಳಪಡುವ ದಂಡಿನ ಬೆಡ್ತಿ, ಕುಂಟ ಬೆಡ್ತಿ ಎನ್ನುವ ದೇವರುಗಳು ಪೂಜಾರಿಗಳು ಹರಿಜನರಾದ ಅಗೇರರು, ಹೊಲೆಯರು ಕೆಳವರ್ಗದವರೇ ಆಗಿರುತ್ತಾರೆ.ಈ ಜಾತ್ರೆಗಳಲ್ಲಿ ಇವರ ಭಾಗವಹಿಸುವಿಕೆಯನ್ನು ಅವರ ಪ್ರತ್ಯೇಕವಾಗಿ ಕಾಣುತ್ತಾರೆ. ಇದು ಅನ್ಯಸಂಸ್ಕೃತಿಯ ಆಕ್ರಮಣ ಕಾಲಾಂತರದಲ್ಲಿ ಹೇಗೆ ನಮ್ಮ ಜನಪದ ಬದುಕನ್ನೇ ಆವರಿಸಿ ಬೆಳೆದಿದೆ ಎಂಬುದಕ್ಕೆ ಜ್ವಲಂತ ಉದಾಹರಣೆಗಳು ಇವೆ. ಕಲಶ ಜಾತ್ರೆಯ ಪ್ರಮುಖ ಆಚರಣೆಯಾದ ಉಲಿ ಚಪ್ಪರ ಏರುವ ಸಂಧರ್ಭದಲ್ಲಿ ಇವರಿಗೆ ಅವಕಾಶವಿಲ್ಲ ಜಾತೀವಾರು ನೀತಿಯಲ್ಲಿಯೇ ಜಾತ್ರೆಗೆ ಸಂಬಂಧಿಸಿದಂತೆ ಆಚರಣೆಗೆ ಹಕ್ಕು ಬಾಧ್ಯತೆಗಳು ವಿತರಣೆಯಾಗಿರುವುದನ್ನು ಜಾತ್ರೆಗಳ ಅಧ್ಯಯನದಿಂದ ಗಮನಿಸಿಬಹುದು. ತೇರಿನ ಮೇಲೆ ದೇವರ ಮುಂದೆ ಪೀಠಸ್ಥನಾಗುವ ಪುರೋಹಿತ ಅಥವಾ ಪೂಜಾರಿಯಿಂದ ಹಿಡಿದು ನೆಲದ ಮೇಲೆ ತೇರಿನ ಮುಂದೆ ತುಸುದೂರದಲ್ಲಿ ವಾದ್ಯ ಮೇಳದಲ್ಲಿ ಭಾಗಿಯಾಗುವವರೆಗೆ ಜಾತ್ರೆಯ ಕೈಂಕರ್ಯಗಳು ಜಾತಿವರು ನೀತಿಯಲ್ಲಿಯೇ ಹಂಚಿಕೆಯಾಗಿರುತ್ತದೆ. ಭಾಗಿಯಾಗುವವರ ಮನಸ್ಥಿತಿಯಲ್ಲಿ ಅದು ಮೇಲು ಕಾರ್ಯ ಇದು ಕೀಳುಕರ್ಮ ಎಂಬ ತಾರತಮ್ಯ ಮೂಡಿಸದಷ್ಟು ಮಟ್ಟಿಗೆ ಆಳವಾಗಿ ಈ ಹಕ್ಕು ಬಾಧ್ಯತೆಗಳು ಅಧಿಕಾರ ಸ್ಥಾಪಿಸಿದ್ದರೂ ಇಂದು ಅಲ್ಲಿಲಿ ಆರ್ಥಿಕ ಮತ್ತು ರಾಜಕೀಯವಾಗಿ ಬಲ್ಯಾಢ್ಯರಾಗಿರುವ ಹಿಂದುಳಿದ ವರ್ಗಗಳು ಶ್ರೇಣೀಕೃತ ಜಾತಿವಾರು ವವ್ಯಸ್ಥೆಯನ್ನು ಧಿಕ್ಕರಿಸಿ ತಮ್ಮ ಪ್ರಭುತ್ವ ಸ್ಥಾಪಿಸಿಕೊಂಡಿದ್ದಾರೆ. ಉದಾಹರಣಿಗೆ ಅಂಕೋಲಾ ತಾಲೂಕಿನ ವೆಂಕಟ್ರಮಣ ರಥೋತ್ಸವದಲ್ಲಿ ರಥ ಮೇಲೆ ದೇವರ ಉತ್ಸವ ಮುರ್ತಿಯೊಂದಿಗೆ ನಾರಯಣ ನಾಯ್ಕ, ಮಯೂರು ನಾಯಕ ಮುಂತಾದವರು ರಥವೇರಿದ್ದರೆ, ಧರ್ಮದರ್ಶಿಗಳಾಗಿ ಹಿಂದುಳಿದವರು ಕಾರ್ಯ ನಿರ್ವಹಿಸುತ್ತಾರೆ.

ಜನಪದ ಕಲೆಗಳು –ಆಧುನಿಕ ಕ್ರೀಡೆ

ಇಂದಿನ ಜಾತ್ರೆ ಸಂಧರ್ಭದಲ್ಲಿ ಆಗಾಧ ಬದಲಾವಣಿ ಜನಪದ ಕಲೆ ಮತ್ತು ಕ್ರೀಡೆಗಳಲ್ಲಿ ಕಂಡು ಬರುತ್ತದೆ.ಇತ್ತಿಚೆಗೆ ಜನಪದ ಕಲೆಗಳ ಜಾಗದಲ್ಲಿ ವಿದ್ಯುತ್ ಚಾಲಿತ ಮಿಶಿನ್ಗಳು ಆಕೆಲಸ ಮಾಡುತ್ತವೆ.ಗ್ರಾಮೀಣ ಕ್ರೀಡೆಗಳ ಬದಲಾಗಿ ಹೊಸ ಹೊಸ ಸ್ಪರ್ಧಾಕ್ರೀಡೆಗಳಾದ ವಾಲಿಬಾಲ್,ಬಿಚ್ ಬಾಲ್ ಕಂಡುಬರುತ್ತದೆ.

ಯಾವದೇ ಬದಲಾವಣಿ ಕಂಡು ಬಂದರೂ ಜನಪದರ ಬದುಕಿನಲ್ಲಿ ಜಾತ್ರೆಗಳಿಗೆ ಅತ್ಯಂತ ಮಹತ್ವ ಸ್ಥಾನವಿದೆ. ಭಾರತ ದೇಶದಲ್ಲಂತೂ ಜಾತ್ರೆ ಎನ್ನುವುದು ಅತ್ಯಂತ ಪರಿಚಿತ ಮತ್ತು ಆಕರ್ಷಕ ವಿಷಯವಾಗಿದ್ದು, ನಮ್ಮ ಜನಜೀವನದ ಮೂಲ ಪ್ರಶ್ನೆಯೇ ಆಗಿರುವುದು. ಜಾತ್ರೆಯನ್ನು ನೋಡದ, ಜಾತ್ರೆಯನ್ನು ನಡೆಸದ ಗ್ರಾಮಗಳನ್ನು ಕಲ್ಪನೆ ಮಾಡಿಕೊಳ್ಳುವುದು ಅಸಾಧ್ಯ ಎನ್ನುವಷ್ಟರ ಮಟ್ಟಿಗೆ ಜನಪದರ ಜೀವನದ ಅವಿಭಾಜ್ಯ ಅಂಗಗಳಾಗಿ ಜಾತ್ರೆಗಳು ಪ್ರಾಮುಖ್ಯತೆ ಪಡೆದಿವೆ.ಧರ್ಮ – ನಂಬಿಕೆ – ಆಚರಣೆ – ಸಂಪ್ರದಾಯ – ಪರಂಪರೆ – ಸಂಸ್ಕೃತಿ – ಕಲೆ – ಮೊದಲಾದವುಗಳ ಸುತ್ತ ಹೆಣೆಯಲ್ಪಟ್ಟಿರುವ ಈ ಜಾತ್ರೆ – ಉತ್ಸವಗಳು ನಾಡಿನ ಎಲ್ಲೆಡೆ ಪ್ರತಿ ವರ್ಷವು ಜರುಗುತ್ತಿದ್ದು, ಇವುಗಳು ಆಯಾ ಕಾಲದ ನಿರ್ಧಿಷ್ಟ ಸಮಾಜದ ಸಾಂಸ್ಕೃತಿಕ ಮತ್ತು ಸಾಮಾಜಿಕ ಸಂಕೀರ್ಣ ವ್ಯವಸ್ಥೆಯ ರೂಪಗಳಾಗಿವೆ. ಜಾನಪದದ ವಿವಿಧ ಮಗ್ಗಲಗಳ ಅಧ್ಯಯನ ಪಾಶ್ವಾತ್ಯ ದೇಶಗಳಿಗೆ ಹೋಲಿಸಿದರೆ ನಮ್ಮ ನಾಡಿನಲ್ಲಿ ತಕ್ಕ ಮಟ್ಟಿಗೆ ನೆಡೆದಿದೆ. ಆದರೆ, ಜಾತ್ರೆಗಳನ್ನು ಕುರಿತಂತೆ ವೈಜ್ಞಾನಿಕ ರೀತಿಯ ಅಧ್ಯಯನವಂತೂ ಅತ್ಯಲ್ಪವೆಂದೇ ಹೇಳಬೇಕು. ಜಾನಪದ ಅಧ್ಯಯನಕ್ಕೆ ಸಂಶೋಧನೆಗೆ ಚಿನ್ನದ ಗಣಿಯಂತಿರುವ ನಮ್ಮ ನಾಡಿನಲ್ಲಿ ಹಲವು ಪುಸ್ತಕಗಳನ್ನು ಮಗುಚಿದರೂ– ಜಾತ್ರಾ ಪರಿಕಲ್ಪನೆಯ ಹುಟ್ಟು, ಬೆಳವಣಿಗೆ, ಮಹತ್ವ– ಇವುಗಳ ಬಗೆಗೆ ಹೆಚ್ಚಿನ ನಿಖರವಾದ ಮಾಹಿತಿ ಅಧ್ಯಯನ ಮಾಡಬೇಕಾಗಿದೆ ಆ ದಿಸೆಯಲ್ಲಿ ಪ್ರಯತ್ನವಾಗುತ್ತಿದ್ದರೂ ಜಾತ್ರೆಗಿಂತ ಅದಕ್ಕೆ ಹತ್ತಿರವಾದ ಹಬ್ಬ–ಹರಿದಿನ ಹುಣ್ಣಿಮೆಗಳ ಬಗ್ಗೆಯೇ ಹೆಚ್ಚಿನ ಮಾಹಿತಿ ಲಭಿಸುತ್ತದೆ. ಇಲ್ಲವೇ ಹಬ್ಬ–ಜಾತ್ರೆಗಳು ಒಂದೇ ಎಂಬರ್ಥದಲ್ಲಿಯು ಕೆಲವು ಸಲ ವಿವೇಚಿಸಲಾಗಿದೆ. ಜಾತ್ರೆಗಳನ್ನು ಕುರಿತಂತೆ ಪ್ರಾದೇಶಿಕ ವಿಶಿಷ್ಠತೆಯ ಬಿಡಿ ಬಿಡಿ ಲೇಖನಗಳು ಚಿಕ್ಕ ಪುಟ್ಟ ಕೃತಿಗಳು, ಗ್ರಂಥಗಳು, ಅಲ್ಲದೆ ಇತ್ತೀಚೆಗೆ ಕೆಲವು ಸಂಶೋಧನಾ ಮಹಾಪ್ರಬಂಧಗಳು ಹೊರಬಂದಿವೆ. ಪ್ರತಿ ಜಿಲ್ಲೆ, ತಾಲೂಕು, ಗ್ರಾಮ ಹೀಗೆ ಪ್ರಾದೇಶಿಕ ಜಾತ್ರೆಗಳ ಅಧ್ಯಯನ ಗಂಭೀರ ಚಿಂತನೆಗಳು, ಸಂಶೋಧನಾತ್ಮಕ ಕಾರ್ಯಗಳು ಇನ್ನೂ ಆಗಬೇಕಾಗಿದೆ. ಈ ದೃಷ್ಟಿಯಿಂದ ಜನರ ಸ್ಥಿತಿಗತಿ, ಜೀವನ ಮೌಲ್ಯ,

ಸಂಪ್ರದಾಯ, ಸಂಸ್ಕೃತಿ, ಮೊದಲಾದವುಗಳನ್ನು ಬಿಂಬಿಸುವ ಜನಪದದ ಒಂದು ಭಾಗವೇ ಆಗಿರುವ ಜಾತ್ರೆಗಳ ಅಧ್ಯಯನ ಅರ್ಥಪೂರ್ಣವಾಗಿ ಅವಶ್ಯಕವಾಗಿ ನಡೆಯಬೇಕಾಗಿದೆ.

**ಆಧಾರ ಗ್ರಂಥಗಳು**


1. ಹೈದ್ರಬಾದ ಕರ್ನಾಟಕ ಜಾತ್ರೆಗಳ ಒಂದು ಸಾಂಸ್ಕೃತಿಕ ಅಧ್ಯಯನ ಡಾ. ಜಗನ್ನಾಥ ಹೆಬ್ಬಾಳ – ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು – 2008
2. ಉತ್ತರ ಕನ್ನಡ ಜಿಲ್ಲೆಯ ಗ್ರಾಮ ದೇವತೆಗಳ ಹಾಡುಗಳು, ಡಾ.ಎನ್.ಆರ್.ನಾಯಕ.ಜಾನಪದ ಪ್ರಕಾಶನ ಹೋನ್ನಾವರ–2002.
3. ಕರಾವಳಿ ಸೋಗುಗಳ ಬಹುರೂಪ, ಡಾ.ಎನ್.ಆರ್.ನಾಯಕ. ಜಾನಪದ ಪ್ರಕಾಶನ ಹೋನ್ನಾವರ–1998
4. ಕೆನಾರದ ವಿಭಜನೆ, ಡಾ.ಕೆ.ಮೋಹನ್. ಕೃಷ್ಣ ರೈ, ಕನ್ನಡ ವಿಶ್ವವಿದ್ಯಾಲಯ ಹಂಪಿ–2010
5. ಸುರ್ವಣ ಬಿಂದಮ್ಮನವರ ಶಿಕಾರಿ ಪುರದ ಜಾತ್ರೆಗಳು ಸಂಶೋಧನ ಪಿ,ಹೆಚ್.ಡಿ ಮಾಹ ಪ್ರಂಭಂದ, ಕ.ವಿ.ವಿ.ಧಾರವಾಡ–2008
6. ಕರ್ನಾಟಕ ಜಾತ್ರೆಗಳು,ಸಂ.ಸಿ.ಎಸ್.ಶಿವಕುಮಾರ ಸ್ವಾಮಿ, ಮೈಸೂರ ವಿಶ್ವವಿದ್ಯಾಲಯ1988
7. ಡಾ. ಆರ್.ಯ. ಚಪ್ಪರ ಬಂಧ, ಬಿಜಾಪುರ ಜಿಲ್ಲೆಯ ಜಾತ್ರೆಗಳು ಯಾಸ್ಮಿನ ಪ್ರಕಾಸಶನ–2006
8. ಡಾ. ಚೆನ್ನಣ್ಣ ವಾಲೀಕಾರ ರವರ 'ಹೈದರಾಬಾದ–ಕರ್ನಾಟಕ' ಗ್ರಾಮದೇವತೆಗಳು–1998
9. ಡಾ.ಲಕ್ಷೀ ದೇವಿ, ಗ್ರಾಮ ಮತ್ತು ಶಿಷ್ಟ ದೇವತೆಗಳು,ಚಿತ್ಕಲಾ ಪ್ರಕಾಶನ–ಕುಪ್ಪಂ–2007.
10. ಹಿಂದೂ ದೇವಾಲಯಗಳು,ಒಂದು ಸಮಗ್ರ ಪರಿಚಯ,ಸ್ವಾಮಿ ಹರ್ಷಾನಂದ ಕನ್ನಡ ಭಾವನುವಾದ,ಶ್ರೀ ನಿತ್ಯಾನಂದ ಪ್ರಕಾಶನ,ಅಶೋಕ ನಗರ ಬೆಂಗಳೂರ–ಪ್ರಕಟನೆ–2011
11. ಡಾ.ಸಿ.ಬಿ.ಹೋನ್ನಯ್ಯ,ಕನ್ನಡಸಾಹಿತ್ಯಸಂಸ್ಕೃತಿಮೀಮಾಂಸೆ–ಜೈಭೀಮ್ ಪ್ರಕಾಶನ,ಬೆಂಗಳೂರು–2005
12. ಶಿರಸಿಯ ಶ್ರೀ ಮಾರಿಕಾಂಬೆ ಮತ್ತು ಜಾತ್ರೆ, ಎನ್.ಆರ್.ನಾಯಕ ಕನ್ನಡ ಜಾನಪದ ಮತ್ತು ಯಕ್ಷಗಾನ। ಅಕಾಡೆಮಿ – 1996. ಬೆಂಗಳೂರು.
13. ಉತ್ತರ ಕನ್ನಡದ ಯಕ್ಷಗಾನ ರಂಗಭೂಮಿ. ಸಂ. ಡಾ. ಈ. ಎಂ. ಹೆಗಡೆ, ಕ.ವಿ.ವಿ–ಧಾರವಾಡ –1996.
14. ಮುಸ್ಲೀಮರ ಹಬ್ಬ ಮತ್ತು ಉರುಸುಗಳು. ಸಂ.ಡಾ. ದಸ್ತಗಿರಿಅಲ್ಲ ಬಾಯಿ 457 ಕ.ವಿ.ವಿ ಧಾರವಾಡ – 1996.
15. ಗೊ. ರು. ಚನ್ನಬಸಪ್ಪ:(ಸಂ)ಕರ್ನಾಟಕ ಜನಪದ ಕಲೆಗಳು